ಫಾಂಡೆನ್ಸ್ ಕಾಪೀಸನ್ನು ಪ್ರಕಟಮಾಡಿದರು. ಇದರಲ್ಲಿ ಭಾರತ ಸರ್ಕಾರದ ರಕ್ಷಣಾ ಸಚಿವಾಲಯದ ಕಾರ್ಯದರ್ಶಿಯವರು ನಮಗೆ ಏಳು ಪರ್ಸೆಂಟ್ ಕಮಿಷನ್ ಕೊಡಬೇಕು, ಇದಕ್ಕೆ ನೀವು ಒಪ್ಪಿಕೊಳ್ಳಬೇಕು ಎಂದು ಅರ್ಥ ಬರುವ ರೀತಿಯಲ್ಲಿ ಪತ್ರ ಬರೆದಿದ್ದಾರೆ. ಈ ಒಂದು ಕಮಿಷನ್ ವ್ಯವಹಾರ ನೋಡಿದಾಗ ಕೇಂದ್ರ ಸರ್ಕಾರ ಫಾರ್ಮಲ್ ಆಗಿ ಈ ಕೆಲಸ ಮಾಡಿದೆ ಎಂದು ಅರ್ಥವಾಯಿತು. ಇದಕ್ಕಿಂತ ನಾಚಿಕೆಗೇಡಿನ ಪ್ರಕರಣ ಬೇರೆ ಇಲ್ಲ. ಹಿಂದೂ ಪತ್ರಿಕೆಯಲ್ಲಿ ಈ ಪತ್ರ ಪ್ರಕಟವಾಗಿದ್ದರಿಂದ ನಾಳೆ ದಿವಸ ಆ ಪತ್ರಿಕಾ ಕಛೇರಿಯ ಮೇಲಾಗಲಿ ಸಹಿ ರೈಡ್ ಮಾಡಬಹುದು. ಯಾರು ಕೇಂದ್ರ ಸರ್ಕಾರದ ಬಗ್ಗೆ ಒಂದು ಟೀಕೆ ಮಾಡುತ್ತಾರೆ, ಯಾರು ಅದರ ವಿರುದ್ಧ ಒಂದು ಮಾತನ್ನು ಹೇಳುತ್ತಾರೆ. ಅಂತಹವರು ಸುರಕ್ಷಿತವಾಗಿರುವುದಿಲ್ಲವೆಂಬ ಭಾವನೆ ಈ ಪ್ರಕರಣದಿಂದ ಹುಟ್ಟುತ್ತದೆ. ಶ್ರೀ ವಿ.ಪಿ. ಸಿಂಗ್ ಅವರು ಮತ್ತು ಶ್ರೀ ಆರೀಫ್ ಅಹಮದ್ ಖಾನ್‌ಅವರು ಕಾಂಗ್ರೇಸ್ ಪಕ್ಷವನ್ನು ಬಿಟ್ಟ ಕೂಡಲೇ ದೇಶದ್ರೋಹಿಗಳಾದರು. ಇಂತಹವರ ಮೇಲೆ ಹಲ್ಲೆ ಆಗುತ್ತದೆ ಶ್ರೀ ವಿ.ಪಿ.ಸಿಂಗ್ ಅವರ ಕಾರಿನ ಮೇಲೆ ಹಲ್ಲೆ ಆಗುತ್ತದೆ. ಅವರ ಅಂಗರಕ್ಷಕರ ಮೂಳೆಯನ್ನು ಮುರಿಯಲಾಯಿತು. ಇದನ್ನೆಲ್ಲಾ ನೋಡಿದಾಗ ನಾವೇನಾದರೂ ಸರ್ವಾಧಿಕಾರದ ಆಡಳಿತದಲ್ಲಿದ್ದೇವೋ ಏನೋ ಎಂಬುದು ನನಗೆ ಅರ್ಥವಾಗುವುದಿಲ್ಲ. ಈಗ ಇಲ್ಲಿ ಹಾಜರಿರುವಂಥ ಎಲ್ಲಾ ಸದಸ್ಯರ ಒಮ್ಮತದ ಅಭಿಪ್ರಾಯ ಏನೆಂದರೆ, ಈ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಮೇಲೆ ತೆಗೆದುಕೊಂಡ ಕ್ರಮ ಇದು ಖಂಡನೀಯವಾದುದು, ರಾಜಕೀಯ ಉದ್ದೇಶಕ್ಕೋಸ್ಕರ ಮಾಡಿದಂಥ ಕ್ರಮ ಹಾಗೂ ಅವರ ಮೇಲೆ ಸೇಡನ್ನು ತೀರಿಸಿಕೊಳ್ಳುವಂತಹ ಕ್ರಮವಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಪ್ರಬಲವಾದಂಥ ಗದಾ ಪ್ರಹಾರವಾಗಿದೆ. ಇದನ್ನು ನಾವು ಖಂಡಿಸುತ್ತೇವೆ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ. — ಮಾನ್ಯ ಅಧ್ಯಕ್ಷರೇ, ನಾನು ಬರಗಾಲದ ಬಗ್ಗೆ ಉತ್ತರ ಹೇಳುತ್ತಿದೆ. ಈ ಬರಗಾಲ ಕಾಮಗಾರಿ ಕೆಲಸಗಳ ಬಗ್ಗೆ ಯಾವಾಗಲೂ ರಾಜಕೀಯ ಸೇರಿಸದೆ ಎಲ್ಲ ಪಕ್ಷಗಳ ಒಂದು ಸಹಕಾರವನ್ನು ಮತ್ತು ಎಲ್ಲರ ಸಲಹೆಗಳನ್ನು ನಾನು ಮೊದಲಿನಿಂದಲೂ ಪಡೆದುಕೊಳ್ಳುತ್ತಾ ಬಂದಿದ್ದೇನೆ. ಈ ಹಿಂದೆ ಶ್ರೀಮಾನ್ ಖಾರ್ಗೆ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು ಆ ಸಮಿತಿಯವರು ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿ ಸರ್ಕಾರಕ್ಕೆ ಒಂದು ವರದಿ ಕೊಟ್ಟಿದ್ದಾರೆ.

ಶ್ರೀ ಎಂ ಎಸ್ ಕೃಷ್ಣನ್.— ಈಗ ವಿರೋಧ ಪಕ್ಷದವರೆಲ್ಲಾ ಸಭೆಯಿಂದ ಹೊರಗಡೆ ಹೋಗಿದ್ದಾರೆ. ಈಗ ನಾವು ೨-೩ ಜನ ಮಾತ್ರ ಇಲ್ಲಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ನಾಳೆ ಬೆಳಿಗ್ಗೆ ಉತ್ತರ ಕೊಡಬಹುದೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ. — ನಾನು ನಾಳೆ ದೆಹಲಿಗೆ ಹೋಗಬೇಕಾಗಿದೆ.

ಶ್ರೀ ಎಂ. ರಘುಪತಿ. — ವಿರೋಧಪಕ್ಷದವರಿಗೆ ಈ ಬರಗಾಲದ ಬಗ್ಗೆ ಸೀರಿಯಸ್‌ನೆಸ್ ಎಂಬುದು ಇಲ್ಲವಾಗಿದೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದ ಬಗ್ಗೆ ಚರ್ಚೆ (ಮುಂದುವರಿದುದು)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆಗಲೇ ಹೇಳುತ್ತಿದ್ದೆ. ಯಾವುದೇ ರಾಜ್ಯದಲ್ಲಿ ವಿರೋಧಿ ಪಕ್ಷದ ಸದಸ್ಯರ ಅಧ್ಯಕ್ಷತೆಯಲ್ಲಿ ಬರಗಾಲದ ವಿಚಾರದಲ್ಲಿ ವರದಿ ಕೊಡಲಿಕ್ಕೆ ಸಮಿತಿಯನ್ನು ನೇಮಕಮಾಡಿದ ಉದಾಹರಣೆ ಇಲ್ಲ. ಆ ಒಂದು ಸಂಪ್ರದಾಯವನ್ನು ನಾವು ಹಾಕಿದ್ದೇವೆ. ಮಾನ್ಯ ಖರ್ಗೆಯವರು ವರದಿಯಲ್ಲಿ ಏನೇನು ಹೇಳಿದ್ದಾರೋ ಅದನ್ನೆಲ್ಲಾ ಜಾರಿಗೆ ಕೊಟ್ಟಿದ್ದೇವೆ. ಇನ್ನೊಂದು ವಿಚಾರವನ್ನು ಹೇಳಬೇಕಾಗುತ್ತದೆ. ಪದೇ ಪದೇ ಬರಗಾಲಕ್ಕೆ ಬಂದ ಹಣ, ಕೇಂದ್ರ ಸರ್ಕಾರದಿಂದ ಬಂದ ಹಣ, ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಏನು ಮಾಡಿದಿರಿ ಎಂದು ಕೇಳುತ್ತಾರೆ. ನನಗೆ ಆಶ್ಚರ್ಯವಾಗುತ್ತಿದೆ. ಈ ವಿಚಾರದಲ್ಲಿ ನಾನು ಅನೇಕ ಸಲ ಹೇಳಿದ್ದೇನೆ. ನಮಗೆ ಕೇಂದ್ರಸರ್ಕಾರದಿಂದ ಬರತಕ್ಕಂಥ ಹಣ ಏನಿದೆ ಅದು ದಾನವಾಗಿ ಬರುತ್ತಾ ಇಲ್ಲ, ಇದು ನಮ್ಮ ಪಾಲು, ಯೋಜನೆಯಲ್ಲಿ ಬರತಕ್ಕಂಥ ಹಣವನ್ನು ಮುಂಗಡವಾಗಿ ಕೊಡತಕ್ಕಂಥ ವ್ಯವಸ್ಥೆ. ಅಡ್ವಾನ್ಸ್ ಪ್ಲಾನ್ ಅಸಿಸ್ಟೆನ್ಸ್ ಕೇಂದ್ರದಿಂದ ಬರತಕ್ಕಂಥ ಹಣ ಏನಿದೆ ಇದು ನಮ್ಮದೇ ಹಣ. ಮುಂಗಡವಾಗಿ ಕೊಡತಕ್ಕಂಥಾದ್ದರ ಬಗ್ಗೆ ನಮಗೆ ಕೇಳತಕ್ಕಂಥ ಹಕ್ಕು ಇದೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದಂತೆ ಸರ್ಕಾರದ ಆಜ್ಞೆ

ಹೊರಡಿಸಿ ಬರಗಾಲದ ವಿಚಾರದಲ್ಲಿ ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೇವೆ ಯಾವುದೇ ಪಕ್ಷದ ಶಾಸಕರಾಗಿ ಅದರಲ್ಲಿ ಅಧ್ಯಕ್ಷರಾಗಿರುತ್ತಾರೆ. ಅಲ್ಲಿ ಯಾವ ಯಾವ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಸೂಚನೆ ಕೊಡತಕ್ಕಂಥ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಆ ಕೆಲಸದ ವಿವರಗಳನ್ನು ಕೊಡಬೇಕು ಯಾವ ಊರಿನಲ್ಲಿ ಎಷ್ಟು ಹಣಬೇಕೆಂಬ ಅಂದಾಜು ಕೊಡತಕ್ಕಂಥಾದ್ದು, ಅದನ್ನು ತಹಶೀಲ್ದಾರ್ ಆಫೀಸಿನಲ್ಲಿ ಪಬ್ಲಿಷ್ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಜೊತೆಗೆ ಈ ಎಲ್ಲಾ ಕಾಮಗಾರಿಗಳನ್ನು ಇನ್‌ಸ್ಪೆಕ್ಷನ್ ಮಾಡತಕ್ಕಂಥ ಅಧಿಕಾರವನ್ನು ಶಾಸಕರಿಗೆ ಮತ್ತು ಲೋಕಸಭಾ ಸದಸ್ಯರಿಗೆ ಕೊಟ್ಟಿದ್ದೇವೆ. ಅಲ್ಲದೆ ಕಾಲಕಾಲಕ್ಕೆ ತಾಲ್ಲೂಕ್ ವೈಸ್, ಡಿಸ್ಟ್ರಿಕ್ಟ್ ವೈಸ್ ವಿವರವಾದ ಪಟ್ಟಿಯನ್ನು ಈ ಮನೆಯ ಮುಂದೆ ಇಟ್ಟಿದ್ದೇವೆ, ಇಷ್ಟೆಲ್ಲಾ ಮಾಡಿದರೂ ಕೂಡ ಕೇಂದ್ರದಿಂದ ಬಂದ ಹಣ ಏನಾಗಿದೆ ಎಂದು ಪುನಃ ಪುನಃ ಕೇಳುತ್ತಾ ಇದ್ದಾರೆ. ಸದನಕ್ಕೆ ಇದರ ಬಗ್ಗೆ ಕಾಲಕಾಲಕ್ಕೆ ವಿವರವಾದ ಪಟ್ಟಿಯನ್ನು ಕೊಟ್ಟಿದ್ದೇವೆ ಅದನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ನಾವು ತಾಲ್ಲೂಕ್ ವೈಸ್ ಕೂಡ ವಿವರವನ್ನು ಕೊಟ್ಟಿದ್ದೇವೆ. ಈಗ ವಿವರಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ ಮೊದಲು ಈ ವ್ಯವಸ್ಥೆ ಇರಲಿಲ್ಲ. ಹಿಂದೆ ಬರಗಾಲದಲ್ಲಿ ಹಣ ಖರ್ಚಾದರೆ ಎಲ್ಲೆಲ್ಲಿ ಏನೇನಾಗಿದೆ ಎಂದು ನೋಡಲಿಕ್ಕೆ ಸಿಗುತ್ತಾ ಇರಲಿಲ್ಲ. ಇವತ್ತು ಈ ಬಗ್ಗೆ ಪಟ್ಟಿ ಇದೆ. ಮಾನ್ಯ ಸದಸ್ಯರಿಗೆ ಮನಸ್ಸಿನಲ್ಲಿ ಏನಾದರೂ ಸಂಕೋಚ ಬಂದರೆ ಕೆಲಸಗಳನ್ನು ಹೋಗಿ ನೋಡತಕ್ಕಂಥ ಅವಕಾಶ ಇದೆ. ನಾವು ಹಿಂದೆ ಅನೇಕ ಸಲ ವಿವರಗಳನ್ನು ಕೊಟ್ಟಿದ್ದೇವೆ, ೧೯೮೬–೮೭ರಲ್ಲಿ ಕೊಟ್ಟಿದ್ದೇವೆ, ಇದು ಹಳೆಯದು. ಎಲ್ಲೆಲ್ಲಿ ಖರ್ಚಾಗಿದೆ ಎಂದು ಕೇಳಿದರು ಅದನ್ನು ಕೊಟ್ಟಿದೆ, ಪುನಃ ಪುನಃ ನಾವು ಅಂಕಿ ಅಂಶಗಳನ್ನು ಫರ್ನಿಷ್ ಮಾಡಿದ್ದೇವೆ. ಸದಸ್ಯರು ಅದನ್ನು ಓದುವುದಿಲ್ಲ. ಅವರು ಬರಗಾಲದ ಬಗ್ಗೆ ಮಾತನಾಡಬೇಕು ಎಂದು, ಸಮಯ್ನೆ ಟೀಕೆ ಮಾಡಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಾ ಇದ್ದಾರೆ. ಹಿಂದೆ ನಾವು ಕೊಟ್ಟಿರತಕ್ಕಂಥ ಮಾಹಿತಿಯ ಆಧಾರದ ಮೇಲೆ ಮಾತನಾಡಿದರೆ ನಾವು ಉತ್ತರ ಕೊಡಬಹುದು. ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ನಾನು ಹೆಚ್ಚು ವಿವರಗಳಿಗೆ ಹೋಗದೆ. ಈ ವರ್ಷವೂ ಕೂಡ ರಾಜ್ಯದಲ್ಲಿ ಬಂದಂಥ ಅಭಾವ ಪರಿಸ್ಥಿತಿ ಬಗ್ಗೆ ಕೆಲವು ಮಾತುಗಳನ್ನು ಮಾತ್ರ ಹೇಳುತ್ತಾ ಇದ್ದೇನೆ. ಹಿಂದಿನ ವಿಚಾರದ ಬಗ್ಗೆ ಇಷ್ಟೇ ಹೇಳುತ್ತಾ ಇದ್ದೇನೆ. ಯಾವುದೇ ರಾಜ್ಯ ಸರ್ಕಾರ ಇಷ್ಟು ವ್ಯವಸ್ಥಿತವಾಗಿ, ಅಚ್ಚು ಕಟ್ಟಾಗಿ ಜನತಾ ಪ್ರತಿನಿಧಿಗಳು ಪಾಲ್ಗೊಳ್ಳುವಂಥ ಸಮಿತಿಯನ್ನು ಮಾಡಿರಲಿಲ್ಲ, ಇದನ್ನು ಕೇಂದ್ರಸರ್ಕಾರದ ಟೀಮಿನವರೇ ಮೆಚ್ಚಿಕೊಂಡಿದ್ದಾರೆ.ಈ ರೀತಿ ಮಹಾರಾಷ್ಟ್ರದಲ್ಲಿ ಇಲ್ಲ, ಗುಜರಾತಿನಲ್ಲಿ ಇಲ್ಲ,ರಾಜಾಸ್ಥಾನದಲ್ಲಿ ಇಲ್ಲ. ಈ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಈ ವರ್ಷ ಮೆಮೊರ್ಯಾಂಡಮನ್ನು ಕೊಡುವುದಕ್ಕೆ ತಡವಾಯಿತು ಎಂದು ಟೀಕೆ ಆಯಿತು. ತಮಗೆ ಗೊತ್ತಿದ್ದಂತೆ ಕರ್ನಾಟಕದಲ್ಲಿ ಜೂನ್, ಜುಲೈ ತಿಂಗಳಲ್ಲಿ ಆಗತಕ್ಕಂಥ ಮಳೆ ಬಹಳ ಮಹತ್ವದ್ದು, ಬಿತ್ತನೆ ಮಾಡತಕ್ಕಂಥ ಕಾಲ ಅದು. ಆ ಮಳೆ ಹೋದರೆ ನಮಗೆ ಅಭಾವ ಇದೆ ಆ ಮಳೆ ಬಂದರೆ ನಮಗೆ ಅಭಾವ ಇಲ್ಲ. ಜೂನ್ ತಿಂಗಳ ಪ್ರಾರಂಭದಲ್ಲಿ ಸ್ವಲ್ಪ ಮಳೆ ಬಂತು. ಬಿತ್ತನೆ ಆಯಿತು ಆದರೆ ಜೂನ್ ಕೊನೇ ವಾರದಿಂದ ಜುಲೈ ಕೊನೇವರೆಗೆ ಆಗಸ್ಟ್ ೨ನೇ ತಾರೀಖಿನವರೆಗೂ ಮಳೆ ಆಗಲಿಲ್ಲ. ಸುಮಾರು ೩೫–೪೦ ದಿನ ಮಳೆ ಬರದೇ ಇರುವುದರಿಂದ ಬಿತ್ತನೆಗೆ ದೊಡ್ಡ ಹಾನಿ ಉಂಟಾಯಿತು ಅನೇಕ ಕಡೆ ಮಂಗಗಾರು ಬಿತ್ತನೆ ಒಣಗಿ ಹೋಗಿದೆ. ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಕೆಲವು ಭಾಗಗಳಲ್ಲಿ ಮಳೆಯಾಗಿದೆ. ಈ ಮಳೆಯಿಂದ ಅಲ್ಪಸ್ವಲ್ಪ ಮಂಗಗಾರು ಪೀಕು ಚೇತರಿಸಿಕೊಳ್ಳುವುದಕ್ಕೆ ಅನುಕೂಲವಾಗಿದೆ. ಹಿಂಗಾರು ಬೆಳೆ ಬರಬೇಕಾದರೆ ಈ ತಿಂಗಳಲ್ಲಿ ಮಳೆ ಬಂದರೆ ಚೆನ್ನಾಗಿ ಆಗುತ್ತದೆ. ವಿಚಿತ್ರವಾದಂಥ ಪರಿಸ್ಥಿತಿ ಏನೆಂದರೆ, ಈ ವರ್ಷ ಅತೀ ಹೆಚ್ಚು ಮಳೆಯಾಗತಕ್ಕಂಥ ಮಲೆನಾಡಿನಲ್ಲಿ ಅಂದರೆ, ಕೊಡಗು, ಶಿವಮೊಗ್ಗ, ಚಿಕ್ಕಮಂಗಳೂರು, ಮೈಸೂರಿನ ಒಂದು ಭಾಗ, ಹಾಸನದ ಒಂದು ಭಾಗ, ಉತ್ತರ ಕನ್ನಡ ಜಿಲ್ಲೆ, ಧಾರವಾಡ ಜಿಲ್ಲೆ, ಬೆಳಗಾಂ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆಯೇ ಕಡಿಮೆಯಾಗಿದೆ. ಭತ್ತ ಬರತಕ್ಕ ಪ್ರದೇಶಗಳನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಮೆಮೋರಾಂಡಂನಲ್ಲಿ ಈ ಬಗ್ಗೆ ವಿವರಗಳನ್ನು ಕೊಟ್ಟಿದ್ದೇವೆ.ರಾಜ್ಯದಲ್ಲಿರತಕ್ಕ ಜಲಾಶಯಗಳಲ್ಲಿ ೧೦–೧೫ ಪರ್ಸೆಂಟ್ ಮಾತ್ರ ನೀರು ಇದೆ. ಮುಂಬರುವ ತಿಂಗಳಲ್ಲಿ ೧೫ ರಿಂದ ೨೦ ಲಕ್ಷ ಜನಕ್ಕೆ ಉದ್ಯೋಗ ಒದಗಿಸಿಕೊಡಬೇಕಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ದನಕರುಗಳಿಗೆ ಮೇವು ಕೊಡಬೇಕಾಗಿದೆ. ಮಳೆ ಬಿದ್ದರೆ, ಬೀಜ ಗೊಬ್ಬರ ಕೊಡತಕ್ಕಂಥಾದ್ದು ಅವಶ್ಯಕತೆ ಇದೆ. ನಾನು ಆಗಸ್ಟ್ ತಿಂಗಳು ೭ನೇ ತಾರೀಖು ಕೇಂದ್ರದ ಕೃಷಿ ಮಂತ್ರಿಯವರನ್ನು ಭೇಟಿ ಮಾಡಿ ರಾಜ್ಯದ ಬರಗಾಲದ

ವಿಚಾರದಲ್ಲಿ ಏವರೆಗೆ ಕೊಟ್ಟು ೧೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದೇನೆ. ಜೊತೆಗೆ ಎಲ್ಲ ವಿವರಗಳನ್ನು ಅಂದೇ ಲೋಕ ಸಭಾ ಸದಸ್ಯರುಗಳಿಗೆ, ರಾಜ್ಯ ಸಭಾ ಸದಸ್ಯರುಗಳಿಗೆ ಕೊಟ್ಟು, ಪಾರ್ಲಿಮೆಂಟಿನಲ್ಲಿ ನಡೆಯತಕ್ಕ ಚರ್ಚೆಗೆ ಅನುಕೂಲವಾಗುವಂತೆ ಮಾಡಿ ಬಂದಿದ್ದೇನೆ. ಮುಂದೆ ೨೭ ರವರೆಗೆ ಮುಖ್ಯಮಂತ್ರಿಯವರು ನಾನು ಸೇರಿ ಮೆಮೋರಾಂಡಂ ಕೊಟ್ಟದ್ದೇವೆ. ಇದರಲ್ಲಿ ೨೮೦ ಕೋಟಿ ಹಣವನ್ನು ಕೇಳಿದ್ದೇವೆ. ಇದನ್ನು ಯಾವ ಒಂದು ಆಧಾರದ ಮೇ ! ತಯಾರು ಮಾಡಿದ್ದೇವೆ ಎನ್ನುವುದರ ಬಗ್ಗೆ ವಿವಿಧ ಇಲಾಖೆಗಳಿಂದ ತರಿಸಿರತಕ್ಕ ಮಾಹಿತಿ ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯನಿರ್ದರ್ಶಿಗಳಿಂದ, ಜಿಲ್ಲಾಧಿಕಾರಿಯಿಂದ ವಿವರವಾದಂಥ ಮಾಹಿತಿ ತರಿಸಿಕೊಂಡು, ನಾವು ಪುತ್ತೂ ನಮ್ಮ, ಆರ್.ಡಿ.ಸಿ. ಮಂತ್ರಿಗಳಾದ ನಜೀರ್ ಸಾಬ್‌ರವರು ಜಿಲ್ಲೆಗಳಲ್ಲಿ ಸಭೆ ಕರೆದು ಜಿಲ್ಲಾ ಪರಿಷತ್ ಅಧ್ಯಕ್ಷರು, ಉಪಾಧ್ಯಕ್ಷರು ಜೊತೆಗೆ ಅಧಿಕಾರಿಗಳ ಸಭೆ ಸೇರಿಸಿ ಎಲ್ಲಾ ವಿವರಗಳನ್ನು ಕೂಡಿಸಿ ಮೆಮೋರಾಂಡಂ ತಯಾರು ಮಾಡಿದ್ದೇವೆ. ಮಾನ್ಯ ಸದಸ್ಯರುಗಳು, ನೀವು ಇಷ್ಟರಮಟ್ಟಿಗೆ ಬೇಡಿಕೆ ಕಡಿಮೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ನಾನು ಕೂಡ ಅದನ್ನು ಒಪ್ಪುತ್ತೇನೆ. ನಾವು ಮೆಮೋರಾಂಡಂ ಕೊಟ್ಟಮೇಲೆ ಕೂಡ ಮಳೆ ಚೆನ್ನಾಗಿ ಬಂದಿಲ್ಲ ಮುಂದೆ ಸಪ್ಲಿಮೆಂಟರಿ ಡಿಮ್ಯಾಂಡ್ ಮೂಲಕ ಕೊಡತಕ್ಕ ಪ್ರಯತ್ನ ಮಾಡುತ್ತೇವೆ.

ಮಾನ್ಯ ಸದಸ್ಯರುಗಳು ಸಾಮಾನ್ಯವಾದಂಥ ಟೀಕೆ ಮಾಡಿದ್ದು, ರಾಜ್ಯ ಸರ್ಕಾರ ಬರಗಾಲದ ಎಲ್ಲಾ ವ್ಯವಸ್ಥೆಯನ್ನು ಜಿಲ್ಲಾಪರಿಷತ್ತಿಗೆ ವರ್ಗಾಯಿಸಿದೆ, ಜಿಲ್ಲಾ ಪರಿಷತ್ತುಗಳಲ್ಲಿ ಹಣ ಇಲ್ಲ ಯಾವ ರೀತಿ ಕೆಲಸಗಳನ್ನು ಮಾಡುವುದಕ್ಕಾಗುತ್ತದೆಂದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸಭೆಯ ಅವಗಾಹನೆಗೆ ತರುವುದಾದರೆ. ಎನ್ ಆರ್. ಇ.ಪಿ. ನಲ್ಲಿ ಜುಲೈ ಅಂತ್ಯದ ವರೆಗೆ ೧೧.೧೪ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆರ್.ಎಲ್.ಇ.ಜಿ.ಪಿ. ನಲ್ಲಿ ೧೨.೮೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಡಿ.ಪಿ.ಎ.ಪಿ. ನಲ್ಲಿ ೫ ಕೋಟಿ ಬಿಡುಗಡೆ ಮಾಡಿದ್ದೇವೆ. ಡಿ.ಪಿ.ಎ.ಪಿ. ಸ್ಪೇಟ್‌ಗೆ ಸಂಬಂಧಪಟ್ಟಂತೆ ೯೭.೫ ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಪಶ್ಚಿಮಘಟ್ಟದ ಅಭಿವೃದ್ಧಿಗಾಗಿ ೩.೧೮ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆರ್.ಇ.ಜಿ.ಎಸ್. ಗಾಗಿ ೪೯ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದಲ್ಲದೆ, ಬರಗಾಲಕ್ಕಾಗಿ ೭.೫೪ ಲಕ್ಷ ಮತ್ತು ೮ ಕೋಟಿ ಅಂದರೆ ಒಟ್ಟು ೧೫ ಕೋಟಿ ಹಣವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡಿದ್ದೇವೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಇದರ ಬಗ್ಗೆ ಸ್ವಲ್ಪ ಗೊಂದಲ ಇದೆ. ಈ ಅಧಿಕಾರವನ್ನು ಜಿಲ್ಲಾಪರಿಷತ್ತಿಗೆ ಕೊಟ್ಟರು ಪುದರ ಬಗ್ಗೆ ಆನೇಕ ಸದಸ್ಯರಲ್ಲಿ ಆತಂಕದ ಪರಿಸ್ಥಿತಿ ಉಂಟಾಗಿದೆ. ಆದರೆ ಇದು ಯಾವ ರೀತಿಯಿಂದ ಕಾರ್ಯಗತವಾಗುತ್ತಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ತಿನಲ್ಲಿ ಸಿದ್ಧತೆ ಇಲ್ಲ ಎಂದು ಹೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತಿಗೆ ಅಧಿಕಾರ ವಹಿಸಿದಮೇಲೆ ಎಲ್ಲಾ ಕಾರ್ಯಗಳನ್ನು ಅವರಿಗೆ ವಹಿಸಿ ಕೊಟ್ಟಿದ್ದೇವೆ. ಇದು ಹಸ್ತಾಂತರವಾಗಬೇಕಾಗಿದೆ. ಅಧಿಕಾರ ಹಸ್ತಾಂತರ, ಕೆಲಸಗಳು ಹಸ್ತಾಂತರ, ಯಂತ್ರಗಳ ಹಸ್ತಾಂತರ, ಇವೆಲ್ಲಾ ಆಗಬೇಕಾಗಿದೆ. ಇದು ಆಗುವಲ್ಲಿ ಸ್ವಲ್ಪ ವಿಳಂಬವಾಗಿದೆ. ಇವತ್ತು ಬಿ.ಡಿ.ಓ. ಮಾಡತಕ್ಕ ಕೆಲಸ ಏನಿತ್ತು, ರಸ್ತೆ ಕೆಲಸ, ಜನತಾ ಮನೆಗಳ ಕೆಲಸ, ಪಿ ಹೆಚ್.ಇ. ನವರು ಕೊಳವೆ ಬಾವಿ ತೆಗೆಸತಕ್ಕ ಕೆಲಸ, ಲೋಕೋಪಯೋಗಿ ಇಲಾಖೆಯಿಂದ ಆಗತಕ್ಕ ಕೆಲಸ, ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮಾಡತಕ್ಕ ಕೆಲಸ, ಈ ಕೆಲಸಗಳೆಲ್ಲಾ ಜಿಲ್ಲಾ ಪರಿಷತ್ತಿಗೆ ವರ್ಗಾವಣೆಯಾಗಿದೆ. ಅಧಿಕಾರಿಗಳ ವರ್ಗಾವಣೆಯಾಗಿದೆ. ಆಸ್ತಿಯ ವರ್ಗಾವಣೆ, ಕೆಲಸಗಳ ವರ್ಗಾವಣೆ ಇವೆಲ್ಲಾ ಆಗಿದೆ. ರಾತ್ರಿದಲ್ಲಿಯೇ ಕ್ರಾಂತಿಕಾರಕವಾದ ಬದಲಾವಣೆ ಮಾಡುವ ಕಾಲದಲ್ಲಿ ಈ ವಿಳಂಬ ಆಗುತ್ತದೆ. ಆದರೆ ಈಗ ಇದು ಸರಿಪಟ್ಟಿದೆ. ಜಿಲ್ಲಾಪರಿಷತ್‌ನಲ್ಲಿ ಹಣ ಇದೆ. ಮಂಡಲ್ ಪಂಚಾಯತ್‌ಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ನಾನು ಇದುವರೆಗೂ ಸುಮಾರು ೫೦ ಮಂಡಲಗಳಿಗೆ ಹೋಗಿದ್ದೇನೆ. ಅವರಿಗೆ ಹಣ ಹೋಗಿದ್ದರೂ ಯಾವ ರೀತಿಯಿಂದ ಖರ್ಚು ಮಾಡಬೇಕೆಂದು ತಿಳಿಯದೇ ಗೊಂದಲವಾಗಿದೆ. ಈಗಾಗಲೇ ಇದರ ಬಗ್ಗೆ ನಾವು ಅವರಿಗೆ ವಿವರಣೆಯನ್ನು, ನಿರ್ದೇಶನವನ್ನು, ಮಾರ್ಗದರ್ಶನವನ್ನು ಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಈಗ ತಾವು ಕೊಟ್ಟರೂಪ ಹಣದಲ್ಲಿ ೫೦ ಪರ್‌ಸೆಂಟ್ ಕಟ್ ಮಾಡಿದ್ದೀರಿ. ಇಂಪ್ಲಿಮೆಂಟ್ ಮಾಡಲಿಕ್ಕೆ ಅಧಿಕಾರ ಕೊಟ್ಟಿಲ್ಲ. ದಯವಿಟ್ಟು ತಾವು ಸುಳ್ಳು ಹೇಳಬೇಡಿ, ಸ್ಪಷ್ಟವಾಗಿ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಅರ್ಧ ಹಣ ಕಟ್ ಮಾಡಿಲ್ಲ. ಹಂತ ಹಂತವಾಗಿ ಬಿಡುಗಡೆ ಮಾಡುತ್ತೇವೆ. ಮೊದಲು ಮೂರು ತಿಂಗಳಿಗೆ ಹಣ ಬಿಡುಗಡೆ ಮಾಡುತ್ತೇವೆ, ಅನಂತರ ೬ ತಿಂಗಳ ಹಣ ಬಿಡುಗಡೆ ಮಾಡುತ್ತೇವೆ. ಒಂದು ವರ್ಷಕ್ಕೆ ಬೇಕಾಗತಕ್ಕ ಹಣವನ್ನು ನಾಲ್ಕು ಇನ್‌ಸ್ಟಾಲ್‌ಮೆಂಟ್‌ಗಳಲ್ಲಿ ಬಿಡುಗಡೆ ಮಾಡುತ್ತೇವೆ. ಮಂಡಲ ಪಂಚಾಯತ್‌ಗಳಿಗೆ ಕೊಡುವ ಹಣ ಎಷ್ಟು ಅಂದರೆ ಅಲ್ಲಿಯ ಜನಸಂಖ್ಯೆ ಎಷ್ಟಿದೆ ಅದರ ಆಧಾರದ ಮೇಲೆ ಬಿಡುಗಡೆ ಮಾಡಿದ್ದೇವೆ. ಮಂಡಲಗಳಿಗೆ ಹೋಗಿ ಭೇಟಿ ಕೊಟ್ಟರೆ ತಮಗೆ ಅರ್ಥವಾಗುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಈಗ ತಮ್ಮಲ್ಲಿ ಒಂದು ತಪ್ಪು ಕಲ್ಪನೆ ಇದೆ. ಮಾನ್ಯ ಬೊಮ್ಮಾಯಿಯವರು ಹೇಳಿದ ಹಾಗೆ ತಾಂತ್ರಿಕವಾದ, ಆಡಳಿತಾತ್ಮಕವಾದ ತೊಂದರೆ ಇದೆ ಈಗಾಗಲೇ ಗ್ರಾಮೀಣ ಅಭಿವೃದ್ಧಿ ಬಗ್ಗೆ ೬೬ ಕೋಟಿ ರೂಪಾಯಿ ಕೊಟ್ಟಿದ್ದೇವೆ ಈಗ ಆಸ್ಪತ್ರೆಗಳು ವರ್ಗಾವಣೆ ಆಗುವಂತಾದ್ದು ಇವೆಲ್ಲಾ ಇರುತ್ತದೆ. ಎಲ್ಲಾ ಒಟ್ಟು ೩೪೦ ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ನೀವು ತಿಳಿದುಕೊಂಡ ಹಾಗೆ ೯೭೦ ಕೋಟಿ ರೂಪಾಯಿಗಳನ್ನು ಒಂದೇ ಸಾರಿ ಕೊಡುವುದಿಲ್ಲ. ಒಂದು ವರ್ಷದ ೧೨ ತಿಂಗಳಲ್ಲಿ ತಿಂಗಳಿಗೆ ಇಷ್ಟಿಷ್ಟು ಎಂದು ಬಿಡುಗಡೆ ಮಾಡಿದ್ದೇವೆ. ನಾನು ೨೦ ಜಿಲ್ಲಾ ಪರಿಷತ್ತುಗಳಿಗೂ ಹೋಗಿದ್ದೇನೆ, ಕೆಲವು ಜಿಲ್ಲೆಗಳಲ್ಲಿ ಮಂಡಲ್ ಪ್ರಧಾನರನ್ನು ಕರೆಸಿ ಮಾತನಾಡಿದ್ದೇನೆ. ಕೆಲವೊಂದು ಕಡೆ ಕಾರ್ಯದರ್ಶಿಗಳನ್ನು ಕೊಡಲಿಕ್ಕೆ ಆಗಿಲ್ಲ. ಕೆಲವು ಕಡೆ ಹಣ ಹೋಗಿದ್ದರೂ ವೆಚ್ಚವನ್ನು ಯಾವರೀತಿ ಮಾಡಬೇಕೆಂದು ಗೊಂದಲವಾಗಿದೆ. ಆದ್ದರಿಂದ ಇದರ ಬಗ್ಗೆ ಈಗಾಗಲೇ ನಿರ್ದೇಶನ ಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಬೆಂಗಳೂರಿನಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದೀರಿ ಪ್ರಾಕ್ಟಿಕಲ್ ಆಗಿ ಏನು ನಡೆಯುತ್ತದೆ ಎನ್ನುವುದನ್ನು ನಾವು ಹೇಳುತ್ತೇವೆ ಕೇಳಿ. ನಮ್ಮ ಮಾನ್ಯ ನಜೀರ್‌ಸಾಬ್ ಅವರಿಗೆ ಸರಿಯಾದ ಮಾಹಿತಿ ಇಲ್ಲ. ಸುಮಾರು ಆರು ತಿಂಗಳಿಂದ ಇಪ್ಪತ್ತು ಸಾವಿರ ರೂಪಾಯಿ ಮಂಡಲ್ ಪಂಚಾಯಿತಿಗೆ ಕೊಟ್ಟಿದ್ದಾರೆ. ಕೆಲವರಿಗೆ ಕಡಿಮೆ ಕೊಟ್ಟಿದ್ದಾರೆ, ಕೆಲವರಿಗೆ ಜಾಸ್ತಿ ಕೊಟ್ಟಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ತಲಾವಾರು ೧೦ ರೂಪಾಯಿ ಕೊಡುವಂತಾದ್ದು ಏನಿದೆ ಅದರ ಬಗ್ಗೆ ನಿಮ್ಮ ತಪ್ಪು ಕಲ್ಪನೆ ಇದೆ ನಾನೂ ನಿಮ್ಮ ಜಿಲ್ಲೆಗೆ ಎರಡು ಸಾರಿ ಬಂದಿದ್ದೇನೆ. ಪ್ರಧಾನರನ್ನು ಕೂರಿಸಿಕೊಂಡು ನಿಮ್ಮೆಲ್ಲರ ಮುಂದೆ ಹಣ ಬಿಡುಗಡೆಯಾಗಿ ಬಂದಿದೆಯೇ ಏನು ಕೇಳಿದ್ದಕ್ಕೆ ಹಣ ಬಂದಿದೆ ಎಂದು ಹೇಳಿದ್ದಾರೆ. ತಲಾವಾರು ಕೊಡತಕ್ಕ ೧೦ ರೂಪಾಯಿ ಅಂದರೆ ವರ್ಷಕ್ಕೆ ನಾಲ್ಕು ಕಂತುಗಳಲ್ಲಿ ಕೊಡುತ್ತೇವೆ. ಜಾಸ್ತಿ ಹಣ ಕೊಡಲಿಕ್ಕೆ ಬರುವುದಿಲ್ಲ. ೨೦ ಸಾವಿರ ಇರುವಂಥ ಒಂದೊಂದು ಮಂಡಲಿಕ್ಕೆ ನಾಲ್ಕಾರು ರೀತಿಯಲ್ಲಿ ಹಣ ಬರುತ್ತದೆ. ನಾನಾ ಸ್ಕೀಮಿನ ಹಣ ಬರುತ್ತದೆ, ನಾವು ಏನು ಯೋಜನೆಗಳನ್ನು ಹಾಕುತ್ತೇವೆ ಅದಕ್ಕೆ ಸಂಬಂಧಪಟ್ಟಂತೆ ಅದು ಬರುತ್ತದೆ. ಇನ್ನೊಂದು ಗ್ರಾಂಟ್ ಎಂದು ಬರುತ್ತದೆ. ಅದು ವಿಕಾಸದ ಕಾರ್ಯಕ್ರಮಕ್ಕೆ ಬರುತ್ತದೆ. ಈ ಎಲ್ಲಾ ಹಣವನ್ನು ''ಮಂಡಲ ಒಂದು'' ''ಮಂಡಲ ಎರಡು'' ಎಂದು ಎರಡು ಲೆಕ್ಕದಲ್ಲಿ ತೆಗೆದುಕೊಂಡು ಕೆಲಸ ಮಾಡಬೇಕು.

೬-೦೦ ಪಿ. ಎಂ.

ಈ ಹಣವನ್ನು ಬಹಳ ಜವಾಬ್ದಾರಿಯಿಂದ ಉಪಯೋಗ ಮಾಡತಕ್ಕದ್ದು ಮಂಡಲಕ್ಕೆ ಸಂಬಂಧಪಟ್ಟದ್ದು. ಪಂಪ್‌ಗಳ ರಿಪೇರಿಗೋಸ್ಕರ ಜಿಲ್ಲಾ ಪರಿಷತ್‌ನವರು ಮಂಡಲ ಪಂಚಾಯತ್‌ಗಳಿಗೆ ಹಣವನ್ನು ರಿಲೀಸ್ ಮಾಡುತ್ತಾರೆ. ನಾನು ಇತ್ತೀಚೆಗೆ ಭೇಟಿ ನೀಡಿದ ಎಲ್ಲ ಕಡೆಗಳಲ್ಲೂ ಎಲ್ಲ ಸದಸ್ಯರನ್ನೂ ಕೂಡಿಸಿಕೊಂಡು ನಿಮ್ಮ ಮಂಡಲ ಪಂಚಾಯಿತಿಗೆ ಹಣ ಬಂದಿದೆಯೆ ಎಂದು ಕೇಳಿದ್ದೇನೆ. ಅವರೂ ಕೂಡ ಹಣ ಬಂದಿದೆಯೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ತಮ್ಮ ಮೂಲಕ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಯಾವುದಾದರೂ ನಿರ್ದಿಷ್ಟ ಪ್ರಕರಣಗಳಿದ್ದರೆ ಇಲ್ಲಿ ಹೇಳಲಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ತಾವು ಮಂಡಲವನ್ನು ಮಾಡಿದ್ದೀರಿ. ಅದಕ್ಕೆ ೨೦ ಸಾವಿರ ರೂ. ಕೊಟ್ಟಿದ್ದೀರಿ. ಕಳೆದ ೩-೪ ವರ್ಷಗಳಿಂದಲೂ ಹಳ್ಳಿಗಳಲ್ಲಿ ಬೀದಿ ದೀಪಗಳಿಲ್ಲ

ಗ್ರಾಮ ಸಭಾ ಎಂದು ಮಾಡಿದರೆ ರಾಮರಾಜ್ಯ ಸ್ಥಾಪನೆಯಾಗುತ್ತದೆಂದು ಹೇಳಿದ್ದರು. ಆದಕ್ಕೆ ನಾನು ಹೇಳಿದೆ, ರಾಮರಾಜ್ಯ ಆಗುವುದಕ್ಕೆ ಬದಲು ರಾವಣ ರಾಜ್ಯ ಆಗುತ್ತದೆಂದು.

ಶ್ರೀ ಯು. ಭೂಪತಿ.—ಇನ್ನೂ ಒಂದೆರಡು ಪತ್ರಿಕಾ ಕಛೇರಿಗಳ ಮೇಲೆ ರೈಡ್ ಮಾಡಿದರೆ ಅದು ರಾವಣ ರಾಜ್ಯವೇ ಆಗುತ್ತದೆ. ಮಾನ್ಯ ಸಚಿವರು ಮಾತನಾಡುತ್ತಾ ಯಾವುದಾದರೂ ನಿರ್ದಿಷ್ಟ ಪ್ರಕರಣಗಳಿದ್ದರೆ ಹೇಳಿ ಎಂದು ಕೇಳಿದರು. ಅದಕ್ಕೆ ನಾನು ಉದಾಹರಣೆ ಕೊಡುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತೆ ಮಂಡಲಕ್ಕೆ ೨೦ ಸಾವಿರ ರೂಪಾಯಿಗಳನ್ನಲ್ಲ ಕೊಟ್ಟಿರುವುದು. ನಾವು ೧೧ ಲಕ್ಷ ರೂಪಾಯಿ ಕೊಟ್ಟಿದ್ದೇವೆ...

ಶ್ರೀ ಯು. ಭೂಪತಿ.—ನಾನು ಇನ್ನೂ ಮಾತನ್ನೇ ಆಡಿಲ್ಲ. ನೀವು ಊಹೆ ಮಾಡಿಕೊಂಡು ಹೇಳುತ್ತೀರಾ ? ಐ. ಆರ್. ಡಿ. ಪಿ. ಪ್ರೋಗ್ರಾಂನಲ್ಲಿ...

ಅಧ್ಯಕ್ಷರು.—ಮಾನ್ಯ ಭೂಪತಿಯವರೆ ನೀವು ಮಾತನಾಡುವುದಕ್ಕೆ ನಾನು ಅಲೋ ಮಾಡುವುದಿಲ್ಲ. ನೀವು ಈಗಾಗಲೇ ಭಾಷಣ ಮಾಡಿದ್ದೀರಿ. ಮತ್ತೆ ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಕೂಡಿ.

ಶ್ರೀ ಯು. ಭೂಪತಿ.—ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಕೇವಲ ಒಂದೇ ಒಂದು ಉದಾಹರಣೆಯನ್ನು ಕೊಟ್ಟು ಕೂತುಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ನಿಮಗೆ ಮಾತನಾಡಲು ಅವಕಾಶವನ್ನು ಕೊಡುವುದಿಲ್ಲ. ಮಾನ್ಯ ಕೃಷ್ಣನ್‌ರವರೇ ನೀವು ಅವರಿಗೆ ಸಮಾಧಾನ ಹೇಳಿ ಕೂಡಿಸಿ.

ಶ್ರೀ ಯು. ಭೂಪತಿ.—ನೀವು ನನಗೆ ಮಾತನಾಡಲು ಅವಕಾಶವನ್ನು ಕೊಡಲೇಬೇಕು.

ಅಧ್ಯಕ್ಷರು.—ನಾನು ಕೊಡುವುದಿಲ್ಲ. ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

x x x

(ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಶ್ರೀ ಭೂಪತಿಯವರ ಭಾಷಣವನ್ನು ರೆಕಾರ್ಡ್ ಮಾಡಲಿಲ್ಲ)

ಶ್ರೀ ಯು. ಭೂಪತಿ.—ನಾನು ಕೇವಲ ಒಂದೆರಡು ನಿಮಿಷದಲ್ಲಿ ಹೇಳಿ ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಭೂಪತಿಯವರು ಕೇವಲ ಕ್ಲಾರಿಫಿಕೇಷನ್ ಮಾತ್ರ ಕೇಳುತ್ತಿದ್ದಾರೆ...

MR. SPEAKER.—Nothing will be recorded. ನಿಮಗೆ ಉತ್ತರ ಬೇಕೋ? ಬೇಡವೋ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಏನೋ ಒಂದು ವಿಚಾರವನ್ನು ಹೇಳುತ್ತಾರಂತೆ ದಯವಿಟ್ಟು ಅವಕಾಶವನ್ನು ಕೊಡಿ.

† ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಯಾವುದಾದರೂ ನಿರ್ದಿಷ್ಟ ಉದಾಹರಣೆ ಇದ್ದರೆ ಹೇಳಿ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನಾನು ತಮ್ಮ ಮೂಲಕ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಳೆದ ತಿಂಗಳು ನನ್ನ ಕ್ಷೇತ್ರವಾದ ಸಂಡೂರಿನಲ್ಲಿ ಐ. ಆರ್. ಡಿ. ಪಿ. ಬಗ್ಗೆ ಬ್ಯಾಂಕರ್ಸ್ ಮೀಟಿಂಗ್ ಮಾಡಿದಾಗ ಬ್ಯಾಂಕ್‌ನವರು ಏನು ಹೇಳಿದರು ಎಂದರೆ ಚೀಫ್ ಸೆಕ್ರೆಟರಿಯವರಿಂದ ನಮಗೆ ನಿರ್ದೇಶನ ಬಂದಿದೆ, ಆದ್ದರಿಂದ ನಾವು ಸದ್ಯಕ್ಕೆ ೨೫ ಪರ್ಸೆಂಟ್‌ನಷ್ಟು ಹಣವನ್ನು ಕೊಡುತ್ತೇವೆ. ಆದರಲ್ಲಿ ನಿಮ್ಮ ಐ. ಆರ್. ಡಿ. ಪಿ. ಪ್ರೋಗ್ರಾಂ ಕೆಲಸವನ್ನು ಮಾಡಿಸಬೇಕೆಂದು ಹೇಳಿದರು. ಈ ಐ. ಆರ್. ಡಿ. ಪಿ. ಪ್ರೋಗ್ರಾಂನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಡುವುದರಲ್ಲಿ ಸಬ್ಸಿಡಿ ರೂಪದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಿದೆ. ಉಳಿದ ಹಣವನ್ನು ರಿಲೀಸ್ ಮಾಡಿ ಎಂದು ಹೇಳಿದರೆ ಬ್ಯಾಂಕ್‌ನವರು ಏನು ಹೇಳುತ್ತಾರೆಂದರೆ ಸಬ್ಸಿಡಿ

*** Not recorded as ordered by the Chair.

ಹಣವನ್ನು ಮಾತ್ರ ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾವು ಕೇಳುತ್ತಿರುವುದೇನೆಂದರೆ ಸಾಲ ಕೊಡಬೇಕೆಂದು ಕೇಳುತ್ತಿದ್ದೇವೆ. ನಾನು ಹೇಳಿದ ಮೇಲೆ ತಾವು ಉತ್ತರವನ್ನು ಕೊಡಿ. ನನಗೆ ಕನ್‌ಫ್ಯೂಷನ್ ಮಾಡಬೇಡಿ. ಜಿಲ್ಲಾ ಪರಿಷತ್ತಿಗೆ ಹಣ ಬರುತ್ತಿಲ್ಲ. ಬರೀ ಸಬ್‌ಸಿಡಿ ಹಣವನ್ನು ಮಾತ್ರ ಜಿಲ್ಲಾ ಪರಿಷತ್ತಿಗೆ ಕೊಡುತ್ತಿದ್ದಾರೆ. ಸರ್ಕಾರದವರು ವರದಿಯನ್ನು ಬೇಕಾದರೆ ತರಿಸಿ ಕೊಳ್ಳಲಿ.

ಶ್ರೀ ಅಬ್ದುಲ್ ನಜೀರ್ ಸಾಬ್ — ಮಾನ್ಯ ಸದಸ್ಯರು ಶಾಸಕರಾಗಿದ್ದಾರೆ. ಅವರು ಸ್ವಲ್ಪ ತಾಳ್ಮೆಯಿಂದ ವಿಚಾರ ಮಾಡಬೇಕು. ಸಬ್‌ಸಿಡಿ ಹಣವನ್ನು ಏನು ಮಾಡಿದ್ದಾರೆಂದರೆ ಸ್ಟೇಟ್ ಬ್ಯಾಂಕ್‌ಗಳಿಗೆ ಗವರ್ನಮೆಂಟ್ ಆಫ್ ಇಂಡಿಯಾದವರು ರಿಲೀಸ್ ಮಾಡಿರುವ ಬಗ್ಗೆ ರಿಪೋರ್ಟ್ ಮಾಡಿದ್ದಾರೆ. ಮತ್ತೆ ಅವರು ಕೊಟ್ಟಿರುವ ಸಲಹೆಗಳನ್ನು ನಾವು ಒಪ್ಪಿಕೊಂಡಿರುತ್ತೇವೆ. ನಿಮ್ಮ ತಾಲ್ಲೂಕಿನಲ್ಲಿ ೧೦ ಮಂಡಲಿಗಳಿದ್ದರೆ ೧೦ ಮಂಡಲಿಗಳಲ್ಲಿರತಕ್ಕಂಥ ಐದುನೂರು ಜನರಿಗೆ ಹಣವನ್ನು ಕೊಡಬೇಕಾಗಿರುತ್ತದೆ. ಐದುನೂರು ಜನರಿಗೂ ಹಣವನ್ನು ಒಂದೇ ಸಮಯದಲ್ಲಿ ಕೊಟ್ಟರೆ ಐದುನೂರು ಜನರು ಸಂತೆಗೆ ಹೋಗುತ್ತಾರೆ. ಆಗ ಒಂದು ಎಮ್ಮೆಗೆ ೫ ರೂಪಾಯಿ ಇದ್ದುದು ೧೦ ರೂಪಾಯಿ ಬೆಲೆಯಾಗುತ್ತದೆ. ಈ ರೀತಿ ಆಗಬಾರದೆಂದೂ ಹೇಳಿ ಒಂದು ಸೋಷಿಯಲ್ ಪ್ರೋಗ್ರಾಂ ರೀತಿ ನಡೆಯಬೇಕೆಂದು ೨೫ ಪರ್ಸೆಂಟ್ ಸಬ್‌ಸಿಡಿ ಎಂದೂ ತೆಗೆದುಕೊಂಡು ಅವರಿಗೆ ಒಂದು ಪ್ರೋಗ್ರಾಂ ಹಾಕಿದರೆ ಒಳ್ಳೆಯದೆಂದೂ ಹೇಳಿ ಈ ರೀತಿ ಮಾಡಿದ್ದೇವೆ. ಐದುನೂರು ಜನರಿಗೆ ಒಮ್ಮೆಲೇ ಕೊಟ್ಟಲ್ಲಿ ಐದುನೂರು ಜನರು ಸಂತೆಗೆ ಹೋಗುತ್ತಾರೆ. ಆಗ ಬೆಲೆಯೂ ಜಾಸ್ತಿಯಾಗುತ್ತದೆ.

ಶ್ರೀ ಯು. ಭೂಪತಿ.—ತಾವು ಕನ್‌ಫ್ಯೂಸ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾನು ಕನ್‌ಫ್ಯೂಸ್ ಮಾಡುತ್ತಿಲ್ಲ. ೨೫ ಪರ್ಸೆಂಟ್ ಕೊಟ್ಟಿರುವುದು ನಿಜ. ನಾನು ಹೇಳುತ್ತಿರುವುದೇನೆಂದರೆ ಪ್ರತಿವರ್ಷ ಐ. ಆರ್. ಡಿ. ಪಿ. ಪ್ರೋಗ್ರಾಂ ಹಾಕಿಕೊಳ್ಳುವುದು ಇರುತ್ತದೆ. ಇದನ್ನು ಒಂದು ತಿಂಗಳಲ್ಲಿಯೇ ಮಾಡತಕ್ಕಂಥದ್ದಲ್ಲ ಪ್ರತಿವರ್ಷವೂ ಈ ಯೋಜನೆಯ ಅಡಿಯಲ್ಲಿ ಜನರನ್ನು ಗುರಿ ಮಾಡಿದ್ದೇವೆ. ಐದುನೂರು ಜನರಿಗೂ ಕೊಡಬೇಕೆಂದು ನಿಜ. ವರ್ಷ ವರ್ಷ ಕೊಯಬೇಕಾಗಿದಿಯೇ ಬೊರತು ಏಕ್‌ದಮ್ ಕೊಡತಕ್ಕಂಥದ್ದಲ್ಲ ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಆದೇಶವಿದೆ. ಅದನ್ನು ತಾವು ಕೂಡ ಒಪ್ಪಿಕೊಂಡಿರುತ್ತೀರಿ. ಮೂರು ತಿಂಗಳಿಗೆ ಒಂದೊಂದು ಸಾರಿ ಕೊಡುತ್ತೇವೆ. ಇದಕ್ಕೆ ದುಡ್ಡಿಲ್ಲ ಎನ್ನುವ ಅರ್ಥವನ್ನು ಕಲ್ಪಿಸಬೇಡಿ.

ಶ್ರೀ ಯು. ಭೂಪತಿ.—ನಮಗೆ ಅರ್ಥವಾಗಿಲ್ಲ ಎನ್ನುವುದು ಪ್ರಶ್ನೆಯಲ್ಲ. ನಾವು ಚೆನ್ನಾಗಿ ತಿಳಿದುಕೊಂಡಿದ್ದೇವೆ. ನಾಲ್ಕು ಲಕ್ಷ ಸಬ್‌ಸಿಡಿಯನ್ನು ಎರಡು ಸಲ ಕೊಡುತ್ತೇವೆಂದು ನೀವು ಹೇಳುತ್ತೀರಿ. ಎರಡು ಲಕ್ಷ ರೂಪಾಯಿಗಳನ್ನೇ ಕೊಡುತ್ತಿರುವುದು. ಉಳಿದ ಹಣದ ಪ್ರಶ್ನೆಯೇ ಬೇರೆ. ಇದನ್ನು ನೋಡಿದರೆ ಜಿಲ್ಲಾ ಪರಿಷತ್ತಿಗೆ ಹಣವನ್ನು ಕೊಡಲಿಕ್ಕೆ ಇಲ್ಲವೆಂದು ತೋರಿಸುತ್ತದೆ. ಇದನ್ನು ಒಪ್ಪಿಕೊಳ್ಳಿ, ಕೇಂದ್ರ ಸರ್ಕಾರದ ಆದೇಶ ಎಂದು ಹೇಳುತ್ತೀರಿ. ಇದು ಯಾವಾಗ ಬಂದಿತು. ಹೋದ ವರ್ಷ ಇರಲಿಲ್ಲ, ಈ ವರ್ಷ ಹೇಗೆ ಬಂದಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನಾನು ಕೂಡ ೪೦ ಮಂಡಳಿಗಳಿಗೆ ಹೋಗಿದ್ದೆ. ಒಂದೊಂದು ಮಂಡಳಿಯಲ್ಲಿ ೨–೩ ಗಂಟೆಗಳ ಸಮಯ ಕೂತು ಮಾತನಾಡಿ ಎಲ್ಲ ವಿವರಗಳನ್ನು ಪಡೆದಿದ್ದೇನೆ. ಅವರಿಗೆ ಯಾವ ರೀತಿ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಹಣದ ಕೊರತೆಯಿಂದ ತೊಂದರೆ ಆಗಿಲ್ಲ. ಕೆಲವು ಮಂಡಲಿಗಳ ಅಧ್ಯಕ್ಷರು ಏನು ಕೇಳುತ್ತಾರೆಂದರೆ ಹಣವನ್ನು ಎಷ್ಟು ಖರ್ಚು ಮಾಡುವುದಕ್ಕೆ ಅವಕಾಶವಿದೆ ಎಂದು ಕೇಳುತ್ತಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಕೆಲವು ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರಿಗಳ ವರ್ಗಾವರ್ಗಿಯಾಗಿಲ್ಲ ಎಸ್ಟಿಮೇಟ್ಸ್ ಮಾಡಿಲ್ಲ, ಮತ್ತೆ ಕೆಲಸಗಳೂ ಕೂಡ ವರ್ಗಾವಣೆಯಾಗಿಲ್ಲ. ಒಂದೊಂದು ಮಂಡಲಿಯಲ್ಲಿಯೂ ಒಂದೂ ಒಂದೂವರೆ ಲಕ್ಷ ರೂಪಾಯಿ ಇದೆ. ಹಣವನ್ನು ಖರ್ಚು ಮಾಡಲು ಅಧಿಕಾರಿಗಳನ್ನು ಹಾಕಬೇಕು. ಎಸ್ಟಿಮೇಟ್ ಮಾಡಲು ಅಧಿಕಾರಿಗಳನ್ನು ಹಾಕಿದರೂ ಅಧಿಕಾರಿಗಳು ಹಾಜರಾಗಿಲ್ಲ. ಇದರಿಂದ ತೊಂದರೆಯಾಗಿ ಏಳಂಬವಾಗಿದೆ. ವಿಳಂಬವನ್ನು ದೂರ ಮಾಡಬೇಕು ಎನ್ನುವ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂದು ಪ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನು ಜಿಲ್ಲಾಪರಿಷತ್‌ಗೆ ಅಧಿಕಾರಿಗಳನ್ನು ವರ್ಗಾವರ್ಗಿ ಮಾಡುವಬಗ್ಗೆಯೂ ಟೀಕೆ ಇದೆ. ಅಷ್ಟು ಅತುರವಾಗಿ ಅಧಿಕಾರವನ್ನು ಕೊಡುವುದು ಬೇಡ ಎಂದು ಹೇಳಿದರೆ, ಶಾಸಕರಿಗೆಕ್ಕೂ ಒಂದು ಅಧಿಕಾರ ಇದೆ. ನಾವು ಒಂದು ವೇಳೆ ಚೆನ್ನಾಗಿ ಕೆಲಸ

ಮಾಡುವುದಿಲ್ಲವೆಂದು ಹೇಳಿ ಆಪಾದನೆಯನ್ನು ಕೇಂದ್ರ ಸರ್ಕಾರದವರು ಮಾಡಿ ಅಸೆಂಬ್ಲಿಯಿಂದ ತೆಗೆದು ಬಿಟ್ಟರೆ ಏನು ಮಾಡಬೇಕು. ಅದನ್ನು ವಿಚಾರ ಮಾಡಲಿಕ್ಕೆ ಅವಕಾಶವಾಗುತ್ತದೆ. ಇದು ಮೊದಲನೇ ವರ್ಷ ಪ್ರಯತ್ನ ಹೊಸದು. ನನ್ನ ಅನುಭವದಂತೆ ಸ್ಪಷ್ಟವಾಗಿ ಹೇಳಿಬಿಡುವುದಾದರೆ ಅನೇಕ ಕಡೆಯಿಂದ ಯುವಕರು ಜಿಲಾ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದಿರುತ್ತಾರೆ. ಅವರು ಸೇವೆ ಮಾಡತಕ್ಕಂಥ ಕಾತುರತೆಯಿಂದ ಇದ್ದಾರೆ. ಅವರಿಗೆ ಶಿಕ್ಷಣ ಕೊಡಬೇಕು. ಅಧಿಕಾರಿಗಳಿಗೂ ಶಿಕ್ಷಣವನ್ನು ಕೊಡಬೇಕು. ಅಧಿಕಾರಿಗಳ ವರ್ತನೆಯಲ್ಲಿಯೂ ಕೂಡ ಬದಲಾವಣೆಯಾಗಬೇಕು. ಅನೇಕ ಅಧಿಕಾರಿಗಳಿಗೆ ತೊಂದರೆ ಇದೆ. ಜೊತೆಗೆ ಆ ಅಧಿಕಾರಿಗಳಿಗೆ ಸಮ್ಮ ರಾಜ್ಯಮಟ್ಟದಲ್ಲಿ ಇರತಕ್ಕ ಅಧಿಕಾರಿಗಳ ನಡುವೆ ಹೊಂದಾಣಿಕೆ ಬೇಕು. ಅಲ್ಲದೆ ಮಂತ್ರಿಗಳು ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಇವರುಗಳ ಜೊತೆ ಯಾವ ರೀತಿ ಸಂಬಂಧ ಬೆಳೆಯಬೇಕೆಂಬ ಬಗ್ಗೆ ಆಲೋಚಿಸಬೇಕಾಗಿದೆ. ಹೊಸ ಪ್ರಯೋಗ ನಡೆದಾಗ ಪ್ರಾಮಾಣಿಕ ಪ್ರಯತ್ನ ಮಾಡೋಣ, ಸತ್ ಸಂಪ್ರದಾಯಗಳನ್ನು ಹಾಕಿಕೊಳ್ಳೋಣ. ತಪ್ಪಿದ್ದರೆ ತಿದ್ದಿಕೊಳ್ಳೋಣ ಎಂದು ಹೇಳಿ ಬರಗಾಲದ ಎಲ್ಲ ಕಾರ್ಯವನ್ನೂ ಜಿಲ್ಲಾ ಪರಿಷತ್‌ಗಳಿಗೆ ವಹಿಸಿಕೊಟ್ಟಿದ್ದೇವೆಂದು ಹೇಳುತ್ತೇನೆ. ಅವು ಸಮರ್ಪಕವಾಗಿ ನಡೆಯಂಥ ರೀತಿಯಲ್ಲಿ ಸಹಾಯ ಮಾಡೋಣ ಎಂಬ ಮನೋಭಾವವನ್ನು ಬೆಳೆಸಿಕೊಳ್ಳೋಣ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಎತ್ತಿದ್ದಾರೆ. ಬೋರ್‌ವೆಲ್, ಗ್ರೀನ್‌ಕಾರ್ಡ್, ಬಿತ್ತನೆ ಬೀಜ, ಆಫೂರೆಸ್ಪೆಷನ್ ಕಂದಾಯ ರೆಮಿಷನ್-ವಸೂಲಿ, ಸಾಲ ವಸೂಲಿ ಇತ್ಯಾದಿಗಳ ಬಗ್ಗೆ ಎಲ್ಲ ಹೇಳಿದ್ದಾರೆ. ಕಾರ್ಯಾಚರಣೆಯಲ್ಲಿ ಅಲ್ಲಿ ಇಲ್ಲಿ ತಪ್ಪುಗಳು ಆಗಿದ್ದರೆ, ದೋಷಗಳು ಇದ್ದರೆ ತಿದ್ದೋಣ ಎಂದು ಹೇಳುತ್ತೇನೆ. ಮಹತ್ವದ ವಿಚಾರ ಎಂದರೆ ಸಾಲ ವಸೂಲಿ ಮಾಡುವಾಗ ಬಹಳ ಕಿರುಕುಳ ಕೊಡುತ್ತಿದ್ದಾರೆ. ಮನೆ ಜಪ್ತಿ ಮಾಡುತ್ತಿದ್ದಾರೆ, ರೈತರ ಎತ್ತು ಕರುಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಅದು ಸರಿಯಾದುದಲ್ಲ. ಅಂಥಾದ್ದು ಇದ್ದರೆ ಒಂದಾದರೂ ಉದಾಹರಣೆ ಕೊಡಲಿ. ಯಾವ ಗ್ರಾಮದಲ್ಲಿ ಯಾರ ಮನೆಯಲ್ಲಿ ಜಪ್ತಿ ಮಾಡಿದ್ದಾರೆಂಬುದನ್ನು ಹೇಳಲಿ. ಸರ್ಕಾರದ ಆದೇಶ ಸ್ಪಷ್ಟವಾಗಿದೆ. ಯಾವುದೇ ರೈತನ ಸಲಕರಣೆಗಳು ಇರಲಿ, ಎತ್ತು ಕರುಗಳು ಇರಲಿ ಅವನಿಗೆ ಜೀವನಕ್ಕೆ ಬೇಕಾದ ಆಹಾರ ಧಾನ್ಯಗಳನ್ನು ಜಪ್ತಿ ಮಾಡಬಾರದೆಂದು ಸ್ಪಷ್ಟವಾದ ಆಜ್ಞೆ ಇದೆ ಎಲ್ಲಿಯೂ ಆ ರೀತಿ ನಡೆದಿಲ್ಲ, ನಡೆದಿದ್ದರೆ ಹೇಳಿ ಉಗ್ರ ಕ್ರಮ ಕೈಗೊಳ್ಳುತ್ತೇನೆ. ಯಾರಿಗೂ ಹಿಂಸೆ ಕೊಡದೆ ಸಾಲ ವಸೂಲಿ ಮಾಡುತ್ತಿದ್ದಾರೆ. ನೀರಾವರಿ ಪ್ರದೇಶಗಳಲ್ಲಿ ಕಳೆದ ಹತ್ತು ವರ್ಷಗಳಿಂದ ವಾಟರ್ ರೇಟ್ ಕೊಟ್ಟಿಲ್ಲ. ಹಿಂದೆ ೧೯೭೬ರಲ್ಲಿ ವಾಟರ್ ರೇಟ್ ಏನಿತ್ತು ಅದನ್ನು ೧೯೭೮ರಲ್ಲಿ, ೧೯೮೨ರಲ್ಲಿ ಮತ್ತು ೧೯೮೫ರಲ್ಲಿ ಹೆಚ್ಚು ಮಾಡಿದರು. ಅದು ಕೂಡದು ಎಂದು ನಾವು ವಿರೋಧ ಪಕ್ಷದಲ್ಲಿದ್ದಾಗ ಹೇಳಿದೆವು. ೧೯೭೬ರಲ್ಲಿ ಏನು ನೀರಿನ ದರ ಇತ್ತು ಅದನ್ನು ಮಾತ್ರ ರೈತರು ಕೊಡಬೇಕು, ಹೆಚ್ಚು ಮಾಡಿದ್ದನ್ನು ಕೊಡಬಾರದೆಂಬ ಬೇಡಿಕೆಯನ್ನು ಇಟ್ಟಿದ್ದೆವು. ಅದನ್ನು ನಾವು ಈಗ ಜಾರಿಗೊಳಿಸಿದ್ದೇವೆಂದು ಹೆಮ್ಮೆಯಿಂದ ಹೇಳಂತ್ತೇನೆ ವಾಟರ್ ರೇಟ್ ವಿಷಯ ಪಟ್ಟು ಆಗಿತ್ತು. ಅದನ್ನೆಲ್ಲ ತೆಗೆದು ಹಾಕಿ ರೈತರು ೧೯೭೬ರಲ್ಲಿ ಏನು ವಾಟರ್ ರೇಟ್ ಕೊಡುತ್ತಿದ್ದರು ಅದನ್ನೇ ಕೊಡತಕ್ಕ ಅವರ ಬೇಡಿಕೆಯನ್ನು ಒಪ್ಪಿ ಆಜ್ಞೆ ಹೊರಡಿಸಿದ್ದೇವೆ. ಅದನ್ನು ಕೂಡ ಕಂತಂಗಳಲ್ಲಿ ಕೊಡಬಹುದೆಂದೂ ಹೇಳಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ. —ನೀರು ಕೊಟ್ಟರೆ ಮಾತ್ರ ತೆರಿಗೆ ಹಾಕಿ. ನೀರು ಕೊಡದಿದ್ದರೂ ನೀರಿನ ದರವನ್ನು ವಿಧಿಸುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಎಲ್ಲಿ ನೀರು ಬಂದಿದೆ ಅಲ್ಲಿ ಕೊಡಲಿ. ತುಂಗಭದ್ರ ಅಚ್ಚು ಕಟ್ಟು, ಕೆ ಆರ್.ಎಸ್ ವಲಪ್ರಭ ಘಟಪ್ರಭ ಕೆಳಗಿನ ನೀರನ್ನು ತೆಗೆದುಕೊಂಡು ಬೆಳೆ ಬೆಳೆದ ರೈತರಿಗೆ ನೀರಿನ ತೆರಿಗೆ ಕೊಡಲಿಕ್ಕೆ ಏನು ತೊಂದರೆ ಇದೆ. ಇವರಿಗೆ ಕೊಡಲಿಕ್ಕೆ ಶಕ್ತಿ ಸಾಮರ್ಥ್ಯ ಇದೆ. ಖುಷ್ಕಿಗೆ ಮಳೆ ಬಂದಿಲ್ಲ. ನೀರು ಎಲ್ಲಿ ಕೊಟ್ಟಿಲ್ಲ ಅಲ್ಲಿ ನೀರಿನ ದರ ಕೊಡಕೂಡದೂ. ಅದೇ ರೀತಿ ಆಜ್ಞೆ ಮಾಡಿದ್ದೇವೆ. ನೀರನ್ನು ಉಪಯೋಗಿಸಿಕೊಂಡು ತೆರಿಗೆ ಕೊಡದೆ ಇದ್ದಾಗ ಕೇಳಿದರೆ ತಪ್ಪೇ? ಹಾಗಾದರೆ ಬೇರೆ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಹೇಗೆ? ಬ್ಯಾಂಗಾಲಕ್ಕೆ. ಕುಡಿಯುವ ನೀರಿಗೆ ಹಣ ಕೊಡುವುದು ಹೇಗೆ? ಟೀಕೆ ಮಾಡುವಾಗ ಸ್ವಲ್ಪ ಆಲೋಚಿಸಬೇಕು ಸ್ವಲ್ಪ ಜವಾಬ್ದಾರಿಯಂತವಾಗಿ ಟೀಕಿಸಿ. ನೀರು ಕೊಡದೆ ಇದ್ದರೆ ವಾಟರ್ ರೇಟ್ ಕೊಡಬೇಕಾಗಿಲ್ಲ ಎಂಬ ಸರ್ಕಾರಿ ಆಜ್ಞೆ ಇದೆ ಆರು ವರ್ಷಗಳಿಂದ ನೀರು ಉಪಯೋಗಿಸಿಕೊಂಡರೂ ತೆರಿಗೆ ಕೊಟ್ಟಿಲ್ಲ ಎಂಬುದಕ್ಕೆ ಏನು ಆಧಾರವೆಂದರೆ ನಮ್ಮ ರೆಕಾರ್ಡ್ ಆಫ್ ರೈಟ್ಸ್. ಪಹಣಿಯಲ್ಲಿ ಭತ್ತ, ಕಬ್ಬು ಬೆಳೆದಿದ್ದಾನೆ ಎಂದು ಇದ್ದರೆ ಏತಕ್ಕೆ ತೆರಿಗೆ ಕೊಡಬಾರದು?

ಶ್ರೀ ಆರ್. ವೆಂಕಟರಾಮಯ್ಯ.—ಹಾಗಲ್ಲ ಇರುವುದು.

ಅಧ್ಯಕ್ಷರು.—ಆಮೇಲೆ ಹೇಳಿ. ತಮಗೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವ ರೈತರಿಗೆ ಸಾಮರ್ಥ್ಯ ಇದೆಯೋ, ಶಕ್ತಿ ಇದೆಯೋ ಅವರು ತೆರಿಗೆ ಕೊಡಲಿ. ನಾಲ್ಕಾರು ವರ್ಷಗಳಿಂದ ಕೊಡತಕ್ಕ ಹಣ ಯಾರದು ಬಾಕಿ ಇದೆಯೋ ಅವರು ಕಂಪಿನಲ್ಲಾದರೂ ಕೊಡಲಿ ಎಂದು ಹೇಳಿದ್ದೇವೆ. ಅವರು ಕೊಡಬೇಕಾಗುತ್ತದೆ. ಎಲ್ಲಿ ಅಭಾವ ಇದೆ, ಎಲ್ಲಿ ಮಳೆ ಬಂದಿಲ್ಲ ಅಲ್ಲಿ ವಸೂಲು ಮಾಡಬೇಡವು ಬೇಡ. ಎಂದು ಹೇಳಿದ್ದೇವೆ. ಅಂಥ ಯಾರ ಮೇಲು ಒತ್ತಾಯ ಮಾಡಿಲ್ಲ. ಜಪ್ತಿ ಮಾಡಿಲ್ಲ. ಇಷ್ಟೆಲ್ಲಾ ಕಷ್ಟಪಟ್ಟರೂ ಕಂದಾಯ ಇಲಾಖೆ ವಸೂಲಿ ಎಷ್ಟು ಗೊತ್ತಾ ? ೭೦ ಕೋಟಿ ರೂಪಾಯಿ ಕಂದಾಯ ಇಲಾಖೆ ಬಾಕಿ, ವಾಟರ್ ರೇಟ್ ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ನನಗೆ ಆದೇಶ ಕೊಟ್ಟಿದ್ದಾರೆ. ಏಪ್ರಿಲ್ ೫೦ರೊಳಗೆ ೩೦ ಕೋಟಿ ರೂಪಾಯಿ ಹಣ ವಸೂಲು ಮಾಡಿ ಎಂದು ಹೇಳಿದ್ದಾರೆ. ಮೊದಲು ೧೫ ಕೋಟಿ ರೂಪಾಯಿ ಆಗಿತ್ತು. ಇದುವರೆಗೂ ವಸೂಲಾದ ಹಣ ಸುಮಾರು ೨೦ ಕೋಟಿ ರೂಪಾಯಿಗಳಿಂದ ಅಷ್ಟೂ ಕೂಡ ಪೂರ್ತಿ ವಸೂಲಾಗಿಲ್ಲ. ನನಗೆ ಸಂತೋಷ ಏನೆಂದರೆ ಶಿವಮೊಗ್ಗ, ಮಂಡ್ಯ ಮತ್ತು ಧಾರವಾಡ ಜಿಲ್ಲೆಯಲ್ಲಿ ರೈತರು ಕೊಟ್ಟಿದ್ದಾರೆ. ಕೊಡುವಂಥ ಒಂದು ಪ್ರವೃತ್ತಿ ಬೆಳೆಸಬೇಕು. ಇಲ್ಲದೇಹೋದರೆ ಎಲ್ಲವನ್ನೂ ಬಿಡಿ ಎಂಬ ಪ್ರವೃತ್ತಿ ಆದರೆ ಅಭಿವೃದ್ಧಿ ಕಾರ್ಯಗಳನ್ನು ನಾವು ಕೈಬಿಡಬೇಕಾಗುತ್ತದೆ. ಶಕ್ತಿ ಇದ್ದವರು ಕೊಟ್ಟಿದ್ದಾರೆ. ಅದನ್ನು ಆಲೋಚನೆ ಮಾಡಬೇಕು. ಯಾರಿಗೆ ಶಕ್ತಿ ಇದೆ, ಯಾರ ಹತ್ತಿರ ಟ್ರ್ಯಾಕ್ಟರ್ ಇದೆ ಅವರು ಕೊಡಲಿ,

ಶ್ರೀ ಎಂ. ಎಸ್. ಕೃಷ್ಣನ್.—ಶಕ್ತಿ ಇಲ್ಲದೇ ಇರುವವರಿಗೆ ಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ —ಅದನ್ನು ಮಾಡುತ್ತಿದ್ದೇವೆ. ಬಡವರಿಗೆ ಚಿಕ್ಕ ರೈತರಿಗೆ ತೊಂದರೆಯಾಗಿದ್ದರೆ ಹೇಳಿ. ಇನ್‌ಸ್ಟೆನ್ಸಸ್ ಕೊಡಿ. ನಾನು ವಿವರಗಳಿಗೆ ಹೋಗುವುದಿಲ್ಲ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ ಈಗ ಎರಡು ತಿಂಗಳವರೆಗೆ ಈ ವಸೂಲಿ ಕ್ರಮ ತಡೆಹಿಡಿಯುತ್ತೇವೆ. ಕಾರಣ ಏನೆಂದರೆ ಮಳೆ ಬರಬೇಕು. ಹೊಸ ಬೆಳೆ ಬರಬೇಕು. ಆಮೇಲೆ ಯಾರಿಂಯಾರಿಗೆ ಶಕ್ತಿ ಇದೆಯೋ ಎಲ್ಲಿ ಬೆಳೆ ಬರುತ್ತದೋ ಅಂಥವರಿಂದ ವಸೂಲು ಮಾಡುವ ಕ್ರಮ ಹೆಗೆದುಕೊಳ್ಳುತ್ತೇವೆ. ಅದನ್ನು ಕೈಬಿಡುವುದಕ್ಕಾಗುವುದಿಲ್ಲ. ಎರಡು ತಿಂಗಳು ಮೂರು ತಿಂಗಳಲ್ಲಿ ಕೆಲವು ಕಡೆ ಮಳೆ ಬರಬಹುದು. ಇನ್ನು ಕಂದಾಯ ರೆಮಿಷನ್ ಮತ್ತು ಸಸ್ಪೆನ್‌ಷನ್ ಬಗ್ಗೆ ಹೇಳಿದ್ದಾರೆ. ನಾನು ಹೋದ ವರ್ಷದವರೆಗೆ ಅಂಕಿಸಂಖ್ಯೆ ಕೊಟ್ಟಿದ್ದೇನೆ. ರಾಜ್ಯದ ತಂಬಾ ಎಲ್ಲಾ ಹಳ್ಳಿಗಳಲ್ಲೂ ರೆಮಿಷನ್ ಕೊಟ್ಟಿದ್ದೇವೆ. ಸಸ್ಪೆನ್‌ಷನ್ ಮಾಡಿದ್ದೇವೆ. ಈ ವರ್ಷದ ಮುಂಗಾರು ಬಗ್ಗೆ ಅಣೇವಾರಿ ವಿವರ ಬರಬೇಕು. ಎಲ್ಲೆಲ್ಲಿ ಬೆಳೆ ಬಂದಿಲ್ಲವೋ ಅಲ್ಲೆಲ್ಲಾ ಸಸ್ಪೆನ್‌ಷನ್ ಮಾಡುವುದರ ಬಗ್ಗೆ ಆಶ್ವಾಸನೆ ಕೊಡುತ್ತೇನೆ. ಮೂರು ವರ್ಷ ಸತತವಾಗಿ ಸಸ್ಪೆನ್‌ಷನ್ ಆದರೆ ರೆಮಿಷನ್ ಆಗಿಬಿಡುತ್ತದೆ. ಅದನ್ನೂ ಕೂಡಾ ಈ ಸಭೆಯಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಇನ್ನು ಕೆಲವು ವಿಚಾರಗಳನ್ನು ಹೇಳಿ ನನ್ನ ಮಾತಿಂಗಳನ್ನು ಮುಗಿಸುತ್ತಿದ್ದೇನೆ. ಮೊದಲನೆಯದಾಗಿ ಹೇಳುವುದಾದರೆ ಕೇಂದ್ರಸರ್ಕಾರದವರು ಬರಗಾಲ ಪರಿಸ್ಥಿತಿ ಅಧ್ಯಯನಕ್ಕೆ ಕೆಲವು ಮಂತ್ರಿಗಳನ್ನು ನೇಮಿಸಿದ್ದಾರೆ. ಮೊದಲನೆಯದಾಗಿ ಒಂದು ಮಾತು ಹೇಳುತ್ತಿದ್ದೇನೆ. ತಡವಾಗಿಯಾದರೂ ಕೇಂದ್ರ ಸರ್ಕಾರಕ್ಕೆ ಈ ಅಭಾವಪೀಡಿತ ಪ್ರದೇಶದ ಸಮಸ್ಯೆ ಬಗ್ಗೆ ಅರಿವಾಗಿದೆ. ದೆಹಲಿಯಲ್ಲೂ ಮಳೆಯಾಗಿಲ್ಲ ಉತ್ತರದಲ್ಲೂ ಮಳೆಯಾಗಿಲ್ಲ. ಮೊದಲ ಬಾರಿಗೆ ಕೇಂದ್ರಸರ್ಕಾರ ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಡ್ರಾಟ್ ರಿಲೀಫ್ ಕಮಿಟಿಯನ್ನು ಮಾಡಿದೆ ಅದನ್ನು ಸ್ವಾಗತ ಮಾಡೋಣ. ಜೊತೆಗೆ ಬೇರೆ ಬೇರೆ ರಾಜ್ಯಗಳಿಗೆ ಮಂತ್ರಿಗಳನ್ನು ಕಳುಹಿಸುತ್ತಿದ್ದಾರೆ. ನಾಳೆ ದಿವಸ ಕೇಂದ್ರದ ಯೋಜನಾ ಸಹಾಯಕ ಮಂತ್ರಿಗಳಾದ ಶ್ರೀ ಸಖಾರಾಂ ಅವರು ಬೆಂಗಳೂರಿಗೆ ಬರುತ್ತಿದ್ದಾರೆ ಅವರು ಮುಖ್ಯಮಂತ್ರಿಗಳ ಜೊತೆ ಮಾತ್ರ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಿದ್ದಾರೆ. ಆ ಮೇಲೆ ಶಾಸಕರನ್ನು ಮತ್ತು ಲೋಕಸಭಾ ಸದಸ್ಯರನ್ನು ಭೇಟಿ ಮಾಡತಕ್ಕ ಆಸೆ ವ್ಯಕ್ತ ಮಾಡಿದ್ದಾರೆ. ನಾನು ಈ ಮನೆಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾಳೆ ಅವರನ್ನು ಸಮಯ ತೆಗೆದುಕೊಂಡು ಭೇಟಿ ಮಾಡಿ ರಾಜ್ಯದ ಬರಗಾಲದ ಪರಿಸ್ಥಿತಿ ಬಗ್ಗೆ ತಿಳುವಳಿಕೆ ಕೊಟ್ಟು ಹೆಚ್ಚಿಗೆ ಸಹಾಯಕ್ಕಾಗಿ ಒತ್ತಾಯ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರ. ಮಂಗಳೂರನೇ ತಾರೀಖಿಗೆ ಪ್ರಧಾನ ಮಂತ್ರಿಗಳು ಅಭಾವಪೀಡಿತ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದಿದ್ದಾರೆ. ಆ ಸಭೆಯಲ್ಲಿ ಅನೇಕ ಮಹತ್ವದ ವಿಚಾರಗಳನ್ನ

ಮುಖ್ಯಮಂತ್ರಿಗಳು ಎತ್ತುತ್ತಿದ್ದಾರೆ. ಪ್ರಾಮುಖ್ಯವಾಗಿ ರಾಜ್ಯಸರ್ಕಾರದವರು ಮುಖ್ಯವಾದ ಬೇಡಿಕೆಗಳ ಬಗ್ಗೆ ಪದೇಪದೇ ಒತ್ತಾಯ ಮಾಡುತ್ತಿದ್ದೇವೆ ಕಂದಾಯ ಮಂತ್ರಿಗಳ ಸಭೆಯಲ್ಲಿ ಒತ್ತಾಯ ಮಾಡಿದ್ದೇವೆ. ಮುಖ್ಯಮಂತ್ರಿಗಳು ಎನ್.ಡಿ.ಸಿ.ಯಲ್ಲಿ ಮತ್ತು ಪ್ಲಾನಿಂಗ್ ಕಮಿಷನ್‌ನವರಲ್ಲಿ ಮಾತನಾಡಿದ್ದಾರೆ. ಪ್ರೈಮ್‌ಮಿನಿಸ್ಟರ್ ಅವರಿಗೆ ಪತ್ರ ಬರೆದಿದ್ದಾರೆ. ಈಗ ಕೊಡತಕ್ಕ ಹಣ ಎಷ್ಟಿದೆ ಅದನ್ನು ಕಾಂಗ್ರೆಸ್ ಗೆಳೆಯರು ಡೆಲ್ಲಿ ಹಣ ಎಂದು ಏನು ಹೇಳುತ್ತಿದ್ದಾರೆ ಅದು ಡೆಲ್ಲಿ ಹಣ ಅಲ್ಲ.

ನಮಗೆ ಬರತಕ್ಕ ಹಣ, ನಮ್ಮ ಯೋಜನೆಯಲ್ಲಿರತಕ್ಕ ಹಣ ಅದು. ಅದನ್ನು ಅಡ್ವಾನ್ಸ್ ಆಗಿ ಕೊಡುತ್ತಿದ್ದಾರೆ. ಈ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ಒಂದೊಂದು ಸಲ ನನಗೆ ಆಶ್ಚರ್ಯವಾಗುತ್ತದೆ. ನಮ್ಮ ಕಾಂಗ್ರೆಸ್ ಗೆಳೆಯರು ಇಲ್ಲದಿದ್ದಾಗ ಈ ಮಾತನ್ನು ಹೇಳುವುದು ಸರಿಯೋ ತಪ್ಪೋ ಗೊತ್ತಿಲ್ಲ. ದೆಹಲಿಯಲ್ಲಿರತಕ್ಕಂತಹವರು ಚಕ್ರವರ್ತಿಗಳು, ಇಲ್ಲಿರತಕ್ಕಂತಹ ನಾವು ಸಾಮಂತರು ಎನ್ನುವ ಭಾವನೆಯಿಂದ ಮಾತನಾಡುತ್ತಾರೆ. ಈ ಹಣ ರಾಷ್ಟ್ರದ ಹಣ. ಕೇಂದ್ರ ಮತ್ತು ರಾಜ್ಯದ ಹಣ. ಈ ಹಣವನ್ನು ರಾಜ್ಯಕ್ಕೆ ರಾಜ್ಯಾಂಗವಾದ ಪ್ರಕಾರ ಕೊಡಬೇಕು. ನಮಗೆ ಕೊಡತಕ್ಕ ಪಾಲು ಇದು. ಈ ಹಣದಲ್ಲಿ ಕೇಂದ್ರದ ಪಾಲು, ರಾಜ್ಯದ ಪಾಲು ಎಂದು ಇದೆ. ರಾಜ್ಯದ ಕೆಲಸ. ಕೇಂದ್ರದ ಕೆಲಸ ಎಂದು ಬೇರೆಬೇರೆ ಇದೆ. ಇದು ನಮ್ಮ ಹಕ್ಕಿನಿಂದಾಗಿ ಬರತಕ್ಕ ಹಣ. ಅದಕ್ಕಾಗಿ ಏನೋ ದಾನ ಕೊಡುತ್ತಾರೆ, ಉಪಕಾರ ಮಾಡುತ್ತಾರೆಂಬ ಭಾವನೆ ಬೇಡ ಇದು ನಮ್ಮ ಹಕ್ಕು, ಕೊಡತಕ್ಕಂತ ಹದ್ದು ಅವರ ಕರ್ತವ್ಯ. ಅದಕ್ಕಾಗಿ ಒತ್ತಾಯ ಮಾಡಬೇಕಾಗುತ್ತದೆ. ಆದರ ಬಗ್ಗೆ ಫೈನಾನ್ಸ್ ಕಮೀಷನ್‌ರವರೇ ಈ ಹಣ ಯಾವುದು ಎಂದು ಹೇಳಿದ್ದಾರೆ. ಸತತವಾಗಿ ೪-೫ ವರ್ಷಗಳ ಕಾಲ ಬರ ಗಾಲ ಬಂದರೆ ಸಹಾಯಧನವನ್ನು ಸಂಪೂರ್ಣವಾಗಿ ಅನುದಾನ ಅಂತಲೇ ಪರಿಗಣಿಸಬೇಕು ಎನ್ನುವ ಸೂಚನೆ ಇದೆ. ಅದನ್ನೇ ನಾವು ಒತ್ತಾಯ ಮಾಡುತ್ತಿದ್ದೇವೆ. There should be no difference between floods and droughts. ಫ್ಲಡ್ಸ್‌ನಲ್ಲಿ ೭೫ ಪರ್ಸೆಂಟ್ ಗ್ರಾಂಟ್ ಇದೆ. ೨೫ ಪರ್ಸೆಂಟ್ ಲೋನ್ ಇದೆ ಅದೇ ರೀತಿ ಆ ಒಂದು ಆಧಾರದ ಮೇಲೆ ನ್ಯಾಚುರಲ್ ಕೆಲಾಮಿಟಿ ಏನಿದೆ ಇದನ್ನೂ ಅದೇ ಆಧಾರದ ಮೇಲೆ ಪರಿಗಣಿಸಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಶ್ರೀಮಾನ್ ಕೆ.ಎಚ್. ಪಾಟೀಲರು ಈಗ ಇಲ್ಲಿ ಇಲ್ಲ. ಅವರು ಮಾತನಾಡುವಾಗ ನ್ಯೂಟ್ರಿಷನ್‌ಗೆ ಏಕೆ ಕೇಳಿದ್ದೀರಿ ? ಮತ್ತೊಂದಕ್ಕೆ ಏಕೆ ಕೇಳಿದ್ದೀರಿ ಎಂಬುದಾಗಿ ಹೇಳಿದರು. ಆ ರೀತಿಯಾಗಿ ಕೇಂದ್ರದ ಗೈಡ್‌ಲೈನ್ ಇದೆ. ಅದಕ್ಕಾಗಿ ಹಣವನ್ನು ಕೊಡುತ್ತಾರೆ. ಆದುದರಿಂದ ಕೇಳಬೇಕಾಗುತ್ತದೆ. ಅದರಂತೆ ಕೇಳಿದ್ದೇವೆ. ಅದರಲ್ಲೂ ಮಹತ್ವದ ಬದಲಾವಣೆಯಾಗ ಬೇಕಾಗುತ್ತದೆ. Entire guidelines regarding famine should be redically changed. ಅದನ್ನು ಒತ್ತಾಯ ಮಾಡುತ್ತಿದ್ದೇವೆ ಅದರ ಬಗ್ಗೆಯೂ ತಾವು ಕೇಂದ್ರದ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದಾಗ ಒತ್ತಾಯ ಮಾಡಬೇಕು. ಕೊನೆಯಲ್ಲಿ ಹೇಳುವುದಾದರೆ, ನಾನು ಈಗಾಗಲೇ ನನ್ನ ಹೇಳಿಕೆಯಲ್ಲಿ ಹೇಳಿರುವ ಹಾಗೆ, ಯಾವುದೇ ಕಾರಣಕ್ಕಾಗಿಯಾದರೂ ನಮಗೆ ಎಷ್ಟೇ ಕಷ್ಟ ಇದ್ದರೂ, ಆರ್ಥಿಕ ಮುಗ್ಗಟ್ಟು ಇರಲಿ, ರಾಜ್ಯದ ಯಾವುದೇ ಒಬ್ಬ ಕೂಲಿಗಾರರು ಇರಬಹುದು, ರೈತರು ಇರಬಹುದು, ನಮಗೆ ಕೆಲಸ ಕೊಡಿ ಎಂಬುದಾಗಿ ಬಂದು ಕೇಳಿದರೆ ಕೆಲಸವನ್ನು ಕೊಡುತ್ತೇವೆ. ಕೆಲಸದ ಜೊತೆಗೆ ಆಹಾರಧಾನ್ಯವನ್ನೂ ಕೂಡ ಕೊಡುತ್ತೇವೆ. ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ. ಅದರ ವಿವರಣೆಗೆ ನಾನು ಹೋಗುವುದಿಲ್ಲ. ಎಷ್ಟು ಕೊಳವೆ ಬಾವಿಗಳನ್ನು ತೆಗೆದಿದ್ದೇವೆಂಬುದು ತಮಗೆಲ್ಲರಿಗೂ ಗೊತ್ತಿದೆ. ಈ ಮಾತನ್ನು ರಾಷ್ಟ್ರ ಮಟ್ಟದಲ್ಲೇ ಹೇಳಿದ್ದಾರೆ ಅದಕ್ಕಾಗಿ ನಾವು ಈ ವಿಚಾರದಲ್ಲಿ ರಾಷ್ಟ್ರದಲ್ಲಿಯೇ ಒಂದನೇ ಸ್ಥಾನದಲ್ಲಿ ಇದ್ದೇವೆ ಅದಕ್ಕಾಗಿ ನಮ್ಮ ರಾಜ್ಯಕ್ಕೆ ಗೋಲ್ಡ್ ಮೆಡಲ್ ಕೂಡಾ ಬಂದಿದೆ. ಅದೇ ಮಾತನ್ನು ಪದೇ ಪದೇ ಹೇಳಿಕೊಳ್ಳುವುದು ಸರಿಯಲ್ಲ. ರಿಪೇರಿ ಖರ್ಚು ಸ್ವಲ್ಪ ಹೆಚಾಗಿದೆ. ನಾಲ್ಕು ಪಟ್ಟು ಹೆಚ್ಚು ಕೊಳವೆ ಬಾವಿಗಳಾಗಿದ್ದು, ತಾಂತ್ರಿಕ ಸಿಬ್ಬಂದಿ ಕಡಿಮೆ ಇದೆ. ಈಗ ಮಂಡಲ್ ಪಂಚಾಯಿತಿಯವರು ಅವರೇ ಮಾಡಿಕೊಳ್ಳುತ್ತಿದ್ದಾರೆ. ಸ್ವಲ್ಪ ದಿವಸವಾದರೆ ಈ ತೊಂದರೆ ನಿವಾರಣೆಯಾಗುತ್ತದೆ. ಅವರಿಗೇ ಅಧಿಕಾರ ಇದೆ. ಅವರೇ ಸರಿಮಾಡಿಕೊಳ್ಳುತ್ತಾರೆ. ಅವರಿಗೆ ಏನು ಸಹಾಯ ಬೇಕೋ ಅದನ್ನು ಮಾಡೋಣ.

ಅಧ್ಯಕ್ಷರು.— ಕೂಲಿಯನ್ನು ಹೆಚ್ಚು ಮಾಡಿರುವ ಬಗ್ಗೆ ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಹೇಳಂತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಕೊಳವೆ ಬಾವಿಯನ್ನು ರಿಪೇರಿ ಮಾಡುವಂತಹ ತಾಂತ್ರಿಕ ಪರಿಜ್ಞಾನವುಳ್ಳಂತಹ ಜನರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಜನ ಇದ್ದಾರೆ ಎರಡು ಮಂಡಲ್‌ಗಳಿಗೆ ಒಬ್ಬರಂತೆ ಜ್ಯೂನಿಯರ್ ಇಂಜಿನೀಯರ್ ಇದ್ದಾರೆ. ಅವರಲ್ಲೇ ಹಣ ಇದೆ. ಅವರು ಇಂತಹ ಕೆಲಸಗಳಿಗಾಗಿ ಜಿಲ್ಲಾಪರಿಷತ್ತನ್ನು ಕೇಳಬೇಕಾಗಿಲ್ಲ. ಇದೆಲ್ಲಾ ಮುಂದೆ ಗೊತ್ತಾಗುತ್ತದೆ. ಕೂಲಿ ಕೊಡತಕ್ಕ ವಿಚಾರದಲ್ಲಿ ಕೂಲಿ ಕಡಿಮೆಯಾಗಿದೆ ಬರೀ ಸರ್ಕಾರಿ ನೌಕರರಿಗೇ ಹೆಚ್ಚು ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಗಮನಕ್ಕೆ ತೆಗೆದುಕೊಂಡು ಸರ್ಕಾರ ಮೊದಲು ಅಗ್ರಿಕಲ್ಚರಲ್ ಲೇಬರರ್ಸ್‌ಗೆ. ೭-೫೦ ರೂ.ಗಳನ್ನು ಕೊಡುತ್ತಿತ್ತು, ಹೋದ ವರ್ಷ ಅದನ್ನು ೮-೨೫ ರೂ.ಗಳಿಗೆ ಹೆಚ್ಚು ಮಾಡಿದ್ದೆವು, ನಿನ್ನೆ ದಿವಸ ಕೃಷಿ ಕಾರ್ಮಿಕರ ಕೂಲಿಯನ್ನು ೯-೮೦ ರೂ.ಗಳಿಗೆ ಹೆಚ್ಚು ಮಾಡಿ ಆ ಬಗ್ಗೆ ಆದೇಶವನ್ನು ಹೊರಡಿಸಿದ್ದೇವೆ.

ಶ್ರೀ ಎಂ ಎಸ್. ಕೃಷ್ಣನ್.— ಕೇಂದ್ರಕಿಂತಲೂ ಕಡಿಮೆಯಾಯಿತಲ್ಲಾ, ನಿಮ್ಮವರೇ ಒಪ್ಪಿ ಕೊಂಡು ಬಂದಿದ್ದಾರೆ. ಈಗ ಅದರಲ್ಲೂ ಕಡಿಮೆ ಏಕೆ ಮಾಡುತ್ತಿದ್ದೀರಿ ? ಮೊನ್ನೆ ಕಾರ್ಮಿಕ ಮಂತ್ರಿಗಳಾದ ಶ್ರೀಮಾನ್ ಎಸ್.ಕೆ ಕಾಂತಾರವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಒಂದು ನಿರ್ಣಯವನ್ನು ಮಾಡಿದ್ದೇವೆ. ಮುಂದೆ ಆ ಬಗ್ಗೆ ಆಲೋಚನೆ ಮಾಡೋಣ. ಇದರ ಜೊತೆಗೆ ೫೦ ಪರ್ಸೆಂಟ್ ವೇಜಸ್‌ಗೆ ಸಮಾನಾಗಿ ವುಡ್ ಗ್ರೈನ್ಸ್‌ನ್ನು ಕೊಡುತ್ತಿದ್ದೇವೆ.

ಅಧ್ಯಕ್ಷರೇ, ನಾನು ಹೇಳಿದ್ದನ್ನೇ ಪುನಃ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಎಲ್ಲಾ ವಿವರಗಳನ್ನು ನಾನು ಕೊಟ್ಟಿದ್ದೇನೆ. ಮುಂದೆ ಕೂಡಾ ಒಳ್ಳೆಯ ವ್ಯವಸ್ಥೆ ಮಾಡಿ ಒಂದ ಹಣವನ್ನು ಸರಿಯಾಗಿ ವಿನಿಯೋಗ ಆಗುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆನ್ನುವ ಭರವಸೆ ಕೊಡುತ್ತೇನೆ. ಎಲ್ಲರ ಸಲಹೆಗಳಿಗೆ ಋಣಿಯಾಗಿದ್ದೇನೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಪೊಲೀಸ್‌ನೆಯದಾಗಿ ಮಾನ್ಯ ಮಂತ್ರಿಗಳು ಬಹಳ ಚಾಕಚಕ್ಯತೆಯಿಂದ ಉತ್ತರ ಹೇಳಿದ್ದಾರೆ ಏನೆಂದರೆ ಕಂದಾಯ ರೆವಿಷನ್ ಮಾಡುವುದಿಲ್ಲ, ಸಸ್ಪೆನ್‌ಷನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಇಂತಹ ಪರಿಸ್ಥಿತಿ ಇರುವಾಗ ತಾವು ರೆವಿಷನ್ ಮಾಡಬೇಕು. ಬಡವರು, ಬಡ ರೈತರು ಯಾರಿದ್ದಾರೆ ಅವರಿಗಾಗಿ ಇದನ್ನು ಮಾಡಲು ಆಗುವುದಿಲ್ಲ ಎಂದರೆ ಹೇಗೆ ? ಅವರು ೩ ವರ್ಷ ಕಾಯುವುದಕ್ಕೆ ಬರುವುದಿಲ್ಲ. ಇವತ್ತಾ ಯಾರು ಯಾರು ತೊಂದರೆಯಲ್ಲಿದ್ದಾರೋ ಅವರಿಗೆಲ್ಲಾ ಕಂಪ್ಲೀಟ್ ರೆವಿಷನ್ ಮಾಡಿ. ಇನ್ನು ಕನಿಷ್ಟ ವೇತನದ ಬಗ್ಗೆ ಹೇಳುವುದಾದರೆ, ಕಾಂತಾ ಅವರು ೧೨ ರೂ. ಮಾಡುತ್ತೇವೆಂದು ಒಪ್ಪಿಕೊಂಡು ಬಂದಿದ್ದಾರೆ. ಅವರು ಈ ವಿಷಯವನ್ನು ವೀಟಿಂಗ್‌ನಲ್ಲಿ ಪಬ್ಲಿಷ್ ಕೂಡಾ ಮಾಡಿದ್ದಾರೆ. ಈಗ ನೀವು ೯ ರೂ. ಎಂದರೆ ಇದು ಅರ್ಥ ಇಲ್ಲದ ಮಾತಾಗುತ್ತದೆ. ಅಲ್ಲಿ ಒಪ್ಪಿ ಬಂದು ಇಲ್ಲಿ ಕೊಡದಿದ್ದರೆ ತಾವು ಟೀಕೆಗೆ ಗುರಿ ಆಗುತ್ತೀರಿ. ಇನ್ನು ಎಂಪ್ಲಾಯ್‌ಮೆಂಟ್ ಬಗ್ಗೆ ೧೫ ಲಕ್ಷ ಜನರಿಗೆ ಕೆಲಸಕೊಡುವ ಗುರಿ ಇಟ್ಟಿದ್ದೀರಿ ಎಂದು ಹೇಳಿದಿರಿ. ಇದು ಅರ್ಥವಾಗುವುದಿಲ್ಲ. ೧೫ ಲಕ್ಷ ಜನರಿಗೆ ಕೆಲಸ ಕೊಡಬೇಕೆಂದರೆ ಆ ಬಗ್ಗೆ ಸ್ಕೀಮ್ ಇದೆಯೇ ? ಯೋಜನೆ ಇದೆಯೆ ? ಅನೇಕ ಕಡೆ ಕೆಲಸ ಇದೆಯೆಂದು ಹೇಳುತ್ತಾರೆ. ಅಲ್ಲಿಗೆ ಜನ ಹೋದರೆ ಕೆಲಸ ಕೊಡುವುದಿಲ್ಲವೆಂದು ಹೇಳುತ್ತಾರೆ. ಯಾರು ಯಾರಿಗೆ ಕೆಲಸ ಇಲ್ಲವೋ ಅವರಿಗೆ ಕೊಡುವುದಕ್ಕೆ ಬಂದೋಬಸ್ತು ಮಾಡುತ್ತೀರಾ ? ಇನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಸರಿಯಾಗಿ ಸಾಮಗ್ರಿಗಳು ಅನೇಕ ಕಡೆ ಸಿಗುತ್ತಾ ಇಲ್ಲ. ಮುಖ್ಯವಾಗಿ ಖಾದ್ಯ ತೈಲ, ಅವಶ್ಯಕ ಸಾಮಗ್ರಿಗಳು ಅಲ್ಲಿ ಸಿಕ್ಕುತ್ತಿಲ್ಲವೆಂದು ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಈ ಬಗ್ಗೆ ಬಂದೋಬಸ್ತು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ೨೫ ಪರ್ಸೆಂಟ್‌ಗಿಂತಾ ಕಡಿಮೆ ಬೆಳೆ ಇದ್ದರೆ ಅದನ್ನು ರೆವಿಷನ್ ಮಾಡುತ್ತೇವೆ. ೨೫ ಪರ್ಸೆಂಟ್‌ಗಿಂತಾ ಹೆಚ್ಚು ಇದ್ದರೆ ಫುಲ್ ಸಸ್ಪೆನ್‌ಷನ್ ಮಾಡುತ್ತೇವೆ. ಶೇಕಡಾ ೩೭.೨ ಅಥವಾ ೫೦ ಕ್ಕಿಂತಾ ಹೆಚ್ಚು ಇದ್ದರೆ ಅರ್ಧ ಸಸ್ಪೆನ್‌ಷನ್ ಮಾಡುತ್ತೇವೆ. ಇದರಿಂದ ಚಿಕ್ಕ ರೈತರಿಗೆ ಏನೂ ತೊಂದರೆಯಾಗುವುದಿಲ್ಲ. ಇದರಿಂದ ೧೦ ಎಕರೆಗಿಂತಾ

ಕಡಿಮೆ ಇರುವವರಿಗೂ ಏನೂ ತೊಂದರೆಯಾಗುವುದಿಲ್ಲ. ಇನ್ನು ಹಸಿರಂಕಾರ್ಡ್ ಯಾರಿಗೆ ಸಿಕ್ಕಿಲ್ಲವೋ ಅವರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಈ ಒಂದು ಜವಾಬ್ದಾರಿಯನ್ನು ನಾವು ಮಂಡಲ್‌ಗಳಿಗೆ ಒಪ್ಪಿಸಿದ್ದೇವೆ. ಅವರು ಜನರನ್ನು ಐಡೆಂಟಿಫೈ ಮಾಡಿ ಕೊಡುತ್ತಾರೆ. ಅದೂ ಗ್ರಾಮಸಭೆಯಲ್ಲಿ ಆ ಬಗ್ಗೆ ಜನರನ್ನು ಗಂರ್ತಿಸಿ ಇದನ್ನು ಕೊಡಬೇಕೆಂದು ಹೇಳಿದ್ದೇವೆ. ಈಗಂತೂ ಕನಿಷ್ಟ ವೇತನದ ಬಗ್ಗೆ ರೂ. ೯.೮೦ ಎಂದು ನಿರ್ಣಯ ಮಾಡಿದ್ದೇವೆ. ನೀವು ಏನು ೧೨ ರೂ.ಗೆ ಏರಿಸಬೇಕೆಂದು ಹೇಳುತ್ತಿದ್ದೀರಿ ಆ ಬಗ್ಗೆ ಪರಿಶೀಲನೆ ಮಾಡೋಣ.

ಶ್ರೀ ಆರ್ ವೆಂಕಟರಾಮಯ್ಯ.—ಅಧ್ಯಕ್ಷರೇ, ಮಂಡಲ್‌ಗಳಿಗೆ ಒಂದು ಲಕ್ಷ ರೂಪಾಯಿ ಗ್ರಾಂಟ್ ಮಾಡಿರುವುದು, ಅದರಲ್ಲಿ ೫೦ ಸಾವಿರ ರೂ. ಫಸ್ಟ್ ಫೇಸ್ ರಿಲೀಸ್ ಆಗಿ ಒಂದು ತಿಂಗಳು ಆಯಿತು. ನೀವು ಈ ಬಗ್ಗೆ ಒಂದು ಲಕ್ಷ ತಾವು ಕೊಟ್ಟರೂ ಕೂಡಾ ಲೆಕ್ಕ ಹಾಕಿದರೆ ೧೦ ಹಳ್ಳಿಗೆ ಹತ್ತು ಸಾವಿರ ಮಾತ್ರ ಆಗುತ್ತದೆ. ಇದರಲ್ಲಿ ೧೦ ಸಾವಿರ ಹಾಕಿದರೆ ಮೆಟೀರಿಯಲ್ ಕಾಂಪೊನೆಂಟೇ ೫೦ ಪರ್ಸೆಂಟ್ ಹೋದರೆ ಉಳಿಕ್ಕಿದ್ದು ೫೦ ಪರ್ಸೆಂಟ್. ಮೆಟೀರಿಯಲ್ ಕಾಂಪೊನೆಂಟ್ ಇರಬೇಕೆಂಬುದನ್ನು ನಾನು ಒಪ್ಪುತ್ತೇನೆ. ಉಳಿಕ್ಕಿದ್ದರಲ್ಲಿ ೫೦ ಜನರಿಗೆ ೧೦ ದಿವಸಕ್ಕೆ ಕೆಲಸವನ್ನು ಕೊಡಬಹುದು: ಏನು ಒಂದು ಲಕ್ಷ ಕೊಡಬೇಕೆಂದು ಒಪ್ಪಿ ೫೦ ಸಾವಿರ ಕೊಟ್ಟಿದ್ದೀರೋ ಅಲ್ಲಿ ಮಿನಿಮಮ್ ೩ ಲಕ್ಷವನ್ನಾದರೂ ಪ್ರತಿಯೊಂದು ಮಂಡಲ್‌ಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

೬-೩೦ ಪಿ.ಎಂ.

ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದಂತಹ ಪಿ.ಹೆಚ್.ಇ. ಡಿವಿಜನ್ ಇತ್ತು. ಆಗ ಚುರುಕಾಗಿ ಕೆಲಸ ನಡೆಯುತ್ತಿತ್ತು. ರೆಗ್ಯೂಲರ್ ಡಿವಿಜನ್‌ಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಈಗ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊಡುತ್ತಿಲ್ಲ. ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಮತ್ತೊಂದು ಗಂಭೀರವಾದ ಸಮಸ್ಯೆ ಏನೆಂದರೆ ಹಳ್ಳಿಗಳಲ್ಲಿ ಹುಟ್ಟಿರುವುದೇ ಒಂದು ಪಾಪ ಎನ್ನುವ ಹಾಗೆ ಆಗಿದೆ. ಮಾನ್ಯ ಬಸವರಾಜ ಪಾಟೀಲ್ ಅನ್ವರಿಯವರಿಗೆ ಒಂದು ಮಾತು ಹೇಳಬೇಕಾಗಿದೆ. ಹಳ್ಳಿಗಳಲ್ಲಿ ಕಾರ್ಡ್‌ಗಳನ್ನು ಹೊಂದಿರುವ ವರಿಗೆ ಒಂದು ಕಾರ್ಡಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಟ್ಟಿದ್ದಾರೆ. ಆಹಾರಧಾನ್ಯ ವಿತರಣೆ ಪದ್ಧತಿಯನ್ನು ಸರಿ ಮಾಡದಿದ್ದರೆ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಖಾದ್ಯ ತೈಲವನ್ನು ಕೊಡುತ್ತೇವೆಂದು ಹೇಳಿಕೊಂಡು ಪಟ್ಟಣಗಳಲ್ಲಿ ಮಾತ್ರ ಪಾಮೋಲಿನ್ ಆಯಿಲ್ ಕೊಡುತ್ತೀರಿ. ಹಳ್ಳಿಗಳ ಕಡೆ ಕಚ್ಚಾ ಪಾಮೋಲಿನ್ ಕೊಡುತ್ತಿದ್ದೀರಿ. ಹಳ್ಳಿಗಳ ಜನ ದೇವರ ದಯೆಯಿಂದ ಆರೋಗ್ಯವನ್ನು ಚೆನ್ನಾಗಿಟ್ಟುಕೊಂಡಿದ್ದಾರೆ. ಅವರಿಗೆ ಯಾವುದೇ ರೋಗ ಬರುತ್ತಿಲ್ಲ. ಹಳ್ಳಿಗಳಲ್ಲಿರತಕ್ಕ ಜನರಿಗೆ ನೀವು ಟೋಪಿ ಹಾಕುತ್ತಿದ್ದೀರಿ. ಪಟ್ಟಣಗಳಲ್ಲಿರತಕ್ಕ ಜನರಿಗೆ ರಿಫೈನ್ಡ್ ಆಯಿಲ್ ಕೊಡುತ್ತೀರಿ, ಹಳ್ಳಿಗಳ ಜನರಿಗೆ ಕಚ್ಚಾ ಆಯಿಲ್ ಕೊಡುತ್ತೀರಿ. ಮತ್ತೊಂದು ವಿಚಾರ ಏನೆಂದರೆ ನಮ್ಮ ಸ್ನೇಹಿತರು ಹೇಳುತ್ತಿದ್ದರು ವಾಟರ್‌ರೇಟ್‌ನ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವಿದೆ ಅದು ಸರಿಯಾಗಿದೆ. ಕೆರೆ ಕಾಲುವೆಗಳಿಂದ ನೀರನ್ನು ಒದಗಿಸಿದರೆ ಮಾತ್ರ ವಾಟರ್‌ರೇಟ್ ಹಾಕಬೇಕು. ವಾಟರ್‌ರೇಟ್ ಹಾಕುವಾಗಲೂ ಸಹ ಜಾಯಿಂಟ್ ಇನ್‌ಸ್ಪೆಕ್ಷನ್ ಅನ್ನು ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಮಾಡಿ ವಾಟರ್‌ರೇಟ್ ಹಾಕಬೇಕು ಅದು ಇರಿಗೇಷನ್ ಆಕ್ಟ್‌ನಲ್ಲಿಯೇ ಇದೆ. ಅದನ್ನು ತಾವು ನೋಡಿ. ಯಾರೋ ಒಬ್ಬರು ತಪ್ಪು ಸ್ವಂತ ದುಡಿಮೆಯಿಂದ ಹಣವನ್ನು ಹಾಕಿಕೊಂಡು ಬಾವಿಯನ್ನು ಮಾಡಿಕೊಂಡಿದ್ದರೆ ಸ್ವಂತ ಹಣವನ್ನು ಖರ್ಚು ಮಾಡಿಕೊಂಡು ನೀರಾವರಿ ವ್ಯವಸ್ಥೆ ಮಾಡಿಕೊಂಡಿದ್ದರೆ ಅವರಿಗೂ ಕೂಡ ವಾಟರ್‌ರೇಟ್ ಹಾಕುತ್ತಿದ್ದೀರಿ ಅದು ತಪ್ಪು. ನಿಮ್ಮ ಆಕ್ಟ್ ಪ್ರಕಾರ ನಡೆದುಕೊಳ್ಳಿ. ಇದರ ಬಗ್ಗೆ ಗಮನಹರಿಸುತ್ತೀರಿ ಎಂದು ನಾವು ತಿಳಿದುಕೊಂಡಿದ್ದೇನೆ. ೧೦ ಎಕರೆಗಿಂತ ಕಡಿಮೆಯಿರುವವರಿಗೆ ಭೂ ಕಂದಾಯ ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ೫ ಗುಂಟೆ ತರಿ ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದರೆ ಅಂತಹವರಿಗೆ ಭೂ ಕಂದಾಯ ಹಾಕಿ ವಸೂಲಿ ಮಾಡುತ್ತಿದ್ದಾರೆ. ಆ ಕಾನೂನು ೫ ಗುಂಟೆಗೆ ಅಪ್ಲೈ ಆಗುವುದಿಲ್ಲವೆಂದು ಹೇಳಿ ಭೂ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ಲ್ಯಾಂಡ್ ಆಕ್ಟ್ ಪ್ರಕಾರ ತರಿ ಭೂಮಿ, ಖುಷ್ಕಿ ಭೂಮಿ ಎಷ್ಟಿರಬೇಕೆಂದು ಇದೆ. ಆ ಪ್ರಕಾರ ಭೂ ಕಂದಾಯವನ್ನು ವಸೂಲಿ ಮಾಡಬೇಕು. ಗ್ರೀನ್ ಕಾರ್ಡ್‌ನ ಬಗ್ಗೆ ತಪ್ಪು ಕಲ್ಪನೆಯಿದೆ. ಲೇಟೆಸ್ಟ್ ಆರ್ಡರ್ ಏನಿದೆ ಎಂಬುದನ್ನು ತಾವು ತರಿಸಿ ನೋಡಿ. ಮಾನ್ಯ ಬಸವರಾಜ ಪಾಟೀಲ

ಅನ್ವರಿಯವರು ಇದ್ದಿದ್ದರೆ ಅವರಿಗೆ ಗೊತ್ತಿದೆ. ತಹಶೀಲ್ದಾರ್ ಇಲ್ಲದಿದ್ದರೆ ಬಿ.ಡಿ.ಓ. ಪರ್ಸನಲ್ ಆಗಿ ಇನ್ಸ್‌ಪೆಕ್ಷನ್ ಮಾಡಿ ರಿಪೋರ್ಟನ್ನು ಫುಡ್ ಸೆಕ್ರೆಟರಿಯವರಿಗೆ ಕಳುಹಿಸಿದರೆ ಅವರು ಗ್ರೀನ್ ಕಾರ್ಡ್ ಕೊಡತಕ್ಕ ಅಧಿಕಾರವನ್ನು ಇಟ್ಟುಕೊಂಡಿದ್ದಾರೆ. ಗ್ರೀನ್ ಕಾರ್ಡ್ ಕೊಡತಕ್ಕ ಅಧಿಕಾರ ಫುಡ್ ಸೆಕ್ರೆಟರಿಯವರಿಗೆ ಇದೆ. ಆ ಅಧಿಕಾರವನ್ನು ಬಿ.ಡಿ.ಓ. ಗಳಿಗೆ ಕೊಡಿ. ಅಧಿಕಾರವನ್ನು ಕೇಂದ್ರೀಕರಣ ಮಾಡುವುದು ಬೇಡ. ಪರ್ಸನಲ್ ಇನ್ಸ್‌ಪೆಕ್ಷನ್ ಮಾಡಿದ ಕೂಡಲೇ ಗ್ರೀನ್ ಕಾರ್ಡ್ ಕೊಡತಕ್ಕ ಅಧಿಕಾರವನ್ನು ಅವರಿಗೆ ಕೊಡಿ. ಆಹಾರ ವಿತರಣೆಯ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಂಡಲಗಳಿಗೆ ಒಂದು ಲಕ್ಷ ರೂಪಾಯಿ ಮಾತ್ರ ಬರುತ್ತದೆ. ಎನ್ನುವ ತಪ್ಪು ಕಲ್ಪನೆ ಮಾನ್ಯ ಸದಸ್ಯರಲ್ಲಿದೆ. ತಲವಾರು ೭.೫೦ ರೂಪಾಯಿ ಬರುತ್ತದೆ. ಬೇರೆ ಬೇರೆ ಕಾರ್ಯಕ್ರಮಗಳಿಂದ ಒಂದು ಮಂಡಲಕ್ಕೆ ೧೫ ರಿಂದ ೨೦ ಲಕ್ಷ ಹಣ ಬರುತ್ತದೆ. ಆ ವಿವರ ಬೇಕಾದರೆ ಕೊಡುತ್ತೇನೆ. ಮಾನ್ಯ ಸದಸ್ಯರು ಗ್ರೀನ್ ಕಾರ್ಡ್‌ನ ಬಗ್ಗೆ ಹೇಳುತ್ತಿದ್ದರಂ ನಾವು ಮಂಡಲಕ್ಕೆ ಆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾವಪ್ಪಯ್ಯ.—ತಾವೇನಂ ಹೇಳುತ್ತಾ ಇರುವುದು, ತಪ್ಪಾಗಿದ್ದರೆ ತಪ್ಪು ಎಂದು ಒಪ್ಪಿಕೊಳ್ಳಿ. ನಾನು ನಿನ್ನೆ ಹೋಗಿ ಕೇಳಿಕೊಂಡು ಬಂದಿದ್ದೇನೆ. ಹಾಗಲ್ಲ ಹೀಗೆ ಇದೆಯೆಂದು ಹೇಳಿದರೆ, ನಾನು ಹೇಳಿದ್ದೇ ಸರಿಯೆಂದು ಮಂತ್ರಿಗಳು ಹೇಳುವುದು ಸರಿಯಲ್ಲ.

ಶ್ರೀ ಕೆ. ರಮೇಶ್‌ಕುಮಾರ್ —ಮಾನ್ಯ ಸದಸ್ಯರು ಹೇಳುವುದು ಸತ್ಯ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸತ್ಯವೆಂದು ತಿಳಿದುಕೊಳ್ಳೋಣ ಗ್ರೀನ್ ಕಾರ್ಡನ್ನು ಯಾರಿಗೆ ಕೊಡಬೇಕೆಂದು ಹೇಳತಕ್ಕ ಅಧಿಕಾರವನ್ನು ಮಂಡಲ ಪಂಚಾಯಿತಿಗೆ ಕೊಟ್ಟಿದ್ದೇವೆ. ಗ್ರೀನ್ ಕಾರ್ಡ್ ಇಷ್ಯು ಮಾಡುವುದು ಬೇರೆ.

ಶ್ರೀ ಯು. ಭೂಪತಿ.—ಮಾನ್ವಿಯಲ್ಲಿ ಮಾನ, ಆಹಾರ ಸಚಿವರು ಹಸಿರು ಕಾರ್ಡುಗಳೆನ್ನೂ ಕೊಡುವುದಿಲ್ಲ ಎಂದು ಹೇಳಿಕೆ ಕೊಟ್ಟಿದ್ದಾರೆ. ನೀವು ರೆಕಮೆಂಡೇಶನ್ ಮಾಡಿದರೆ ಕೊಡುತ್ತೇವೆ ಎಂದು ಹೇಳುತ್ತೀರಿ.

ಶ್ರೀ ರಮೇಶ ಕುಮಾರ್.—ಹಸಿರು ಕಾರ್ಡು ಹಂಚುವಾಗ ಶೇಕಡಾ ೬೦ ರಷ್ಟು ಕೃಷಿ ಕಾರ್ಮಿಕರಂ ಯಾರಂ ಇದ್ದಾರೆ, ಅತ್ಯಂತ ಕೆಳಗಿನ ವರಮಾನ ಇರತಕ್ಕಂಥವರನ್ನು ಕವರ್ ಮಾಡುತ್ತೇವೆ ಎನ್ನತಕ್ಕಂಥ ಸೂಚನೆಯನ್ನು ಸರ್ಕಾರ ಕೊಟ್ಟರು ಸರ್ವೆ ಮಾಡತಕ್ಕಂಥ ಸಂದರ್ಭದಲ್ಲಿ ಶೇಕಡಾ ೬೦ ಕ್ಕಿಂತ ಹೆಚ್ಚು ವ್ಯಾಪ್ತಿಯಲ್ಲಿ ಬರತಕ್ಕಂಥವರನ್ನು ಸೇರಿಸಬೇಕೇ ಬಿಡಬೇಕೆ ಎನ್ನುವ ಜಿಜ್ಞಾಸೆ ಬಂತು. ನಾವು ಕೂಡ ಸಾಕಷ್ಟು ಸದನದಲ್ಲಿ ಹೇಳಿದ್ದೇವೆ ಮತ್ತು ಲಭ್ಯವಿದ್ದಂಥ ಫೋರಮ್‌ಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ವಿಲೇಜ್ ಅಕೌಂಟೆಂಟ್‌ಗಳು ಹಸಿರು ಕಾರ್ಡ್ ಡಿಸ್ಟ್ರಿಬ್ಯೂಟ್ ಮಾಡತಕ್ಕಂಥ ಸಂದರ್ಭದಲ್ಲಿ ಯಾರು ಅರ್ಹರೇ ಇಲ್ಲವೇ ಎಂದು ನೋಡಲಿಲ್ಲ. ಸರಿಯಾದ ರೀತಿ ಲೆಕ್ಕ ತೆಗೆದುಕೊಳ್ಳಲಿಲ್ಲ. ಮನಸ್ಸಿಗೆ ಬಂದಂತೆ ಮಾಡಿದ್ದಾರೆ ಉದಾಹರಣೆಗೆ ಒಂದು ಹ್ಯಾವೆಲ್ಲಿಟ್ ವಿಲೇಜ್‌ನಲ್ಲಿ ಪೂರ್ತಿಯಾಗಿ ಪರಿಶಿಷ್ಟ ಜಾತಿಯವರೇ ಕೃಷಿ ಕಾರ್ಮಿಕರಾಗಿ ಜೀವನ ಮಾಡತಕ್ಕಂಥವರು, ಇದ್ದರೆ ೬೦ ಪರ್ಸೆಂಟ್ ಸೂತ್ರವನ್ನು ಅನ್ವಯ ೨೦ ಮನೆಗಳು ಇದ್ದರೆ, ಬರೇ ಎರಡು ಮನೆಗಳಿಗೆ ಕೊಟ್ಟಿರುತ್ತಾರೆ. ನಾನು ಇತ್ತೀಚೆಗೆ ಬೆಳಿಗ್ಗೆಯಿಂದ ರಾತ್ರಿವರೆಗೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ೧೫ ಹಳ್ಳಿಗಳಲ್ಲಿ ಅಂದರೆ ನಾಲ್ಕು ಮಂಡಲಗಳಲ್ಲಿ ಸುತ್ತಾಡಿದೆ. ಯಾವ ಹಳ್ಳಿಗೆ ಹೋದರೂ ಕೂಡ ನಿರ್ಗತಿಕರಾದಂಥವರು, ಕೂಲಿನಾಲಿ ಜೀವನ ಮಾಡತಕ್ಕಂಥವರು ನಮಗೆ ಕಾರ್ಡು ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳಿದರು. ಮಂಡಲಗಳಿಗೆ ಅಧಿಕಾರ ಕೊಟ್ಟಿದ್ದೇವೆ ಎಂದು ಸನ್ಮಾನ್ಯ ಮಂತ್ರಿಗಳು ಸದನದಲ್ಲಿ ಹೇಳುತ್ತಾರೆ. ಯಾವ ಸೂಚನೆ ಕೊಟ್ಟಿದ್ದಾರೋ, ಯಾವಾಗ ಆರ್ಡರ್ ಬಂದಿದೆಯೋ ನಮಗೆ ಗೊತ್ತಿಲ್ಲ. ನಾವು ಜನರ ನಡುವೆ ಜೀವನ ಮಾಡತಕ್ಕಂಥವರು ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತೇವೆ. ನಮ್ಮ ಗಮನಕ್ಕೆ ಬಂದ ಮಾಹಿತಿಯನ್ನು ತಮ್ಮ ಮುಂದಿಟ್ಟಿದ್ದೇವೆ. ನೀವು ಸತ್ಯ ಹೇಳುತ್ತಿಲ್ಲವೆಂದಲ್ಲ. ನಿಧಾನವಾಗುತ್ತಿದೆ ಸ್ವಲ್ಪ ತಡೆದುಕೊಳ್ಳಬೇಕು ಎಂದು ವಾಸ್ತವಾಂಶ ಹೇಳಿ. ಅದುಬಿಟ್ಟು ನೀವು ಬೇರೆ ಏನಾದರೂ ಹೇಳುವುದಕ್ಕೆ ಪ್ರಯತ್ನಪಟ್ಟರೆ ಜನರನ್ನು ಅಂಧಕಾರದಲ್ಲಿ ಇಟ್ಟಂತಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ತಾವು ಪೂರಾ ಕೇಳಲಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹೋದವಾರ ನಾನು ಮಂಡ್ಯಕ್ಕೆ ಹೋಗಿದ್ದೆ. ಸರ್ಕಾರದಿಂದ ಮಂಡಲ ಪಂಚಾಯತ್‌ಗೆ ನಿಜವಾಗಿ ಸೂಚನೆ ಕಳಿಸಿದ್ದಾರೆ. ಆದರೆ ಮಂಡಲ್ ಪಂಚಾಯತ್ ನವರು ಶಿಫಾರಸ್ಸು ಮಾಡಿ ಬಿ.ಡಿ.ಓ.ಗೆ ಕಳಿಸಿದರೆ ಬಿ.ಡಿ.ಓ ಮತ್ತು ತಹಸೀಲ್ದಾರರು ಅದನ್ನು ಪುಡ್ ಸೆಕ್ರೆಟರಿಗೆ ಕಳಿಸಿದರೆ ಅಲ್ಲಿಂದ ಅಪ್ರೂವ್ ಆಗಬೇಕೆಂಬುದು ನಿಜ. ನನ್ನನ್ನ ಒಂದು ಗ್ರಾಮಸಭೆಯಲ್ಲಿ ಪ್ರಶ್ನೆ ಮಾಡಿದರು ಏನೆಂದರೆ ಇಲ್ಲಿಂದ ಕಳಿಸಿಕೊಟ್ಟರೆ ಅದು ಬೆಂಗಳೂರಿಗೆ ಹೋಗಿ ಯಾವಾಗ ಬರುತ್ತದೆ ಎಂದು. ನಾವು ಜೀವಿಸಿರುವುದರೊಳಗೆ ಬರುತ್ತದೆಯೇ ಎಂದೂ ಕೂಡಾ ಕೇಳಿದರು. ನಾನು ಅವರಿಗೆ ಇಲ್ಲ, ನಮ್ಮ ಪಕ್ಷದ ಸಭೆಯಲ್ಲಿ ಹೇಳಿ, ಇದರ ಅಧಿಕಾರವನ್ನು ಕೆಳಗಿನ ಅಧಿಕಾರಿಗಳಿಗೆ ಕೊಡಲು ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ಈ ಮಂಡಲ್ ಪಂಚಾಯತ್‌ನಿಂದ ಶಿಫಾರಸ್ಸು ಬಂದ ಮೇಲೆ ತಹಸೀಲ್ದಾರರು ಮತ್ತು ಬಿ.ಡಿ.ಓ. ಇಬ್ಬರಿಗೂ ಅಧಿಕಾರ ಕೊಡಿ. ಇಬ್ಬರೂ ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಿ ನೋಡಲಿ. ಅದು ಬಿಟ್ಟು ಸರ್ಕಾರಕ್ಕೇ ಕೊಟ್ಟರೆ ಯಾರಿಗೂ ಸಿಗಲಿಕ್ಕಿಲ್ಲ. ಡೆಪ್ಯುಟಿ ಕಮೀಷನರ್‌ಗೆ ಕೊಟ್ಟರೂ ನಿಧಾನವಾಗುತ್ತದೆ. ಇದರಿಂದ ಬಡಪಾಯಿಗೆ ಅನ್ಯಾಯ ಮಾಡಿದಂತಾಗುತ್ತದೆ. ಬಿ.ಡಿ.ಓ ಮತ್ತು ತಹಸೀಲ್ದಾರರು ಜಾಯಿಂಟ್ ಇನ್‌ಸ್ಪೆಕ್ಷನ್ ಮಾಡಿ ತೀರ್ಮಾನ ಮಾಡಿದರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಮಾತು ನಿಜ, ಅಲ್ಲವೆಂದು ನಾನು ಹೇಳುವುದಿಲ್ಲ. ಮೊದಲು ಕಾರ್ಡು ಕೊಟ್ಟ ಮೇಲೆ ಅನೇಕ ಜನರಿಗೆ ಅರ್ಹರಾದವರಿಗೂ ಕೂಡ ಸಿಕ್ಕಿಲ್ಲ ಎನ್ನುವ ಮಾತು ಬಂತು ಮೊದಲು ಒಂದು ಇನ್‌ಕಮ್ ಲಿಮಿಟ್ ಮಾಡಿ ಒಂದು ಮನೆಯಲ್ಲಿ ನಾಲ್ಕು ಅಗ್ರಿಕಲ್ಚರಲ್ ಲೇಬರರ್ಸ್ ಇದ್ದರೆ ಆವರೆಲ್ಲರ ಆದಾಯ ಕೂಡಿಸಿದ್ದರಿಂದ ಕೆಲವು ಕಡೆ ಕಾರ್ಡು ಕೊಟ್ಟಿರಲಿಲ್ಲ. ಆಮೇಲೆ ಸರ್ಕಾರ ಆಜ್ಞೆ ಮಾಡಿದೆ. ಅಗ್ರಿಕಲ್ಚರಲ್ ಲೇಬರರ್ಸ್ ಇದಕ್ಕೆ ಎಲಿಜಿಬಲ್ ಆಗಿದ್ದಾರೆ, ಅವರಿಗೆ ಕೊಡಬೇಕೆಂದು ಮಾತನ್ನು ಹೇಳಿದ್ದೇನೆ. ಕೆಲವು ಕಡೆ ನಮ್ಮ ನಿರೀಕ್ಷೆಗಿಂತ ಹೆಚ್ಚು ಕಾರ್ಡುಗಳನ್ನು ಕೊಡಲಾಗಿದೆ.

ಶ್ರೀ ಯು. ಭೂಪತಿ.—ಈ ಮಳಿಗೆ ತಪ್ಪು ಮಾಹಿತಿಯನ್ನು ಕೊಡಬೇಡಿ.

ಶ್ರೀ ಎಸ್ ಆರ್ ಬೊಮ್ಮಾಯಿ—ಜರ್ಜೆ ಬೇಕಾದರೆ ಬೇರೆ ಮಾಡೋಣ. ಕ್ವಾಲಿಫಿಕೇಶನ್‌ನಲ್ಲಿ ಹೆಚ್ಚು ಹೇಳಂವುದಕ್ಕೆ ಆಗುವುದಿಲ್ಲ ಗ್ರೀನ್ ಕಾರ್ಡ್ ಕೊಡುವ ವಿಚಾರದಲ್ಲಿ ಮೇಲಿಂದ ಮೇಲೆ ಆಜ್ಞೆಗಳನ್ನು ಮಾಡಲಾಗಿದೆ. ಅನೇಕ ಜನರಿಗೆ ಸಿಕ್ಕಿಲ್ಲ ಎನ್ನುವ ದೂರುಗಳು ಬಂದಿವೆ ಅದನ್ನು ಪರಿಶೀಲನೆ ಮಾಡೋಣ. ಕೆಲವು ಕಡೆ ಯಾರು ಅರ್ಹರಲ್ಲ ಅಂತಹವರಿಗೂ ಕೊಟ್ಟಿರುವ ಉದಾಹರಣೆ ಇವೆ. ಬೇಗ ಕೊಡಬೇಕು ನಿಜ. ಕೊಡಬೇಕಾದರೆ ರೆಕಮಂಡೇಶನ್ ಮಾಡಕ್ಕಂಥ ಅಧಿಕಾರ ಮಂಡಲ್ ಪಂಚಾಯತ್‌ಗೆ ಇದ್ದರೆ, ಕಾರ್ಡ್ ಕೊಡತಕ್ಕಂಥ ಅಧಿಕಾರ ಇಲ್ಲಿದೆ. ಇಷ್ಯೂ ಮಾಡುವುದು ಬೇರೆ, ರೆಕ್‌ಮೆಂಡ್ ಮಾಡುವುದೇ ಬೇರೆ ಇದನ್ನು ಡಿ-ಸೆಂಟ್ರಲೈಸ್ ಮಾಡುವಂತೆ ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ಕಾರ್ಡಿಗೆ ಒಂದು ಕೆ.ಜಿ. ಎಣ್ಣೆ ಕೂಡ ಕೊಡುವುದಿಲ್ಲ. ಈಗ ಮಾನ್ಯ ಆಹಾರ ಸಚಿವರು ಬಂದಿದ್ದಾರೆ. ಹಳ್ಳಿಗಳಿಗೆ ಕಚ್ಚಾ ಎಣ್ಣೆ ಕೊಡುತ್ತಾರೆ ಈಗ್ಗೆ ೬ ತಿಂಗಳಿಂದ ಒಂದೂ ಹಸಿರು ಕಾರ್ಡ್ ಕೊಟ್ಟಿಲ್ಲ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ನೀವು ಎಷ್ಟುಸಾರಿ ಅದ್ದು ಮಾತನಾಡುವುದಕ್ಕಿಂತ ನೀವೇನು ಗುತ್ತಿಗೆ ತೆಗೆದುಕೊಂಡ ಹಾಗೆ ಆಗಿದೆ. ಹೀಗಾದರೆ ನಾನು ಬೇರೆಯವರಿಗೆ ಅವಕಾಶ ಕೊಡಬೇಡವೇ?

ಶ್ರೀ ಯು ಭೂಪತಿ.—ಸರ್ಕಾರದವರು ಮಾಹಿತಿಯನ್ನು ತಪ್ಪಾಗಿ ಕೊಟ್ಟರೆ, ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಬಂದಿಲ್ಲ. ಸರಿಯಾದ ಮಾಹಿತಿ ಬಗ್ಗೆ ಸಭೆಗೆ ಹೇಳಲಿ.....

ಅಧ್ಯಕ್ಷರು.—ಹೀಗಾದರೆ ನಾನು ಸಭೆ ಮುಕ್ತಾಯವಾಯಿತು ಎಂದು ಹೇಳಿಬಿಡುತ್ತೇನೆ.....

ಶ್ರೀ ಆರ್. ವೆಂಕಟರಾಮಯ್ಯ.—ಈಗ ಆಹಾರ ಸಚಿವರು ಬಂದಿದ್ದಾರೆ, ಅವರು ಹೇಳಲಿ. ಆಹಾರ ಧಾನ್ಯ ವಿತರಣೆ ಬಗ್ಗೆ ಹಳ್ಳಿಗಳಲ್ಲಾ ಕೂಡ ಸೂಕ್ತ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಲಿ.....

ಅಧ್ಯಕ್ಷರು —ಹೀಗಾದರೆ ಸಭೆಯನ್ನು ವಂಂಗಿಸೋಣ. ಬರಗಾಲದ ಚರ್ಚೆಗೆ ಉತ್ತರ ಹಾಗೂ ವಿವರಣೆ ಏಲ್ಲವೂ ಮುಕ್ತಾಯವಾಯಿತು. ನಾಳೆ ಬೆಳಿಗ್ಗೆ ೧೧ ಗಂಟೆಯವರೆಗೆ ಸಭೆಯನ್ನು ಮುಂದೂಡಲಾಗಿದೆ.

ಸದನವು ಆರು ಗಂಟೆ ೪೨ ನಿಮಿಷಕ್ಕೆ ವಂಕ್ತಾಯಂವಾಗಿ, ಮತ್ತೆ ಬುಧವಾರ ದಿನಾಂಕ ೨-೯-೮೭ ರಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.

ANNEXURE—I

THE KARNATAKA EXCISE (AMENDMENT) BILL, 1987.

(L. A. Bill No. 35 of 1987).

A Bill further to amend the Karnataka Excise Act, 1965.

Whereas it is expedient further to amend the Karnataka Excise Act, 1965 (Karnataka Act 21 of 1966), for the purposes hereinafter appearing ;

Be it enacted by the Karnataka State Legislature in the Thirty-eighth Year of the Republic of India as follows :—

1. *Short title and commencement.*—(1) This Act may be called the Karnataka Excise (Amendment) Act, 1987.

(2) It shall be deemed to have come into force on the first day of August, 1987.

2. *Insertion of new section* 16A.—After section 16 of the Karnataka Excise Act, 1965 (Karnataka Act 21 of 1966), (hereinafter referred to as the principal Act), the following section shall be inserted, namely :—

"16A. *Licence to manufacture, bottle or manufacture and bottle arrack for sale.*—(1) Notwithstanding anything contained in this Act, no licence,—

(a) to manufacture ; or

(b) to bottle ; or